# ಪ್ರದೇಶದ ಸಾಮಾಜಿಕ ಪರಿಕಲ್ಪನೆ*

**ರಾಬರ್ಟ್ ಸ್ಯಾಕ್**

ಎಲ್ಲ ಸಮಾಜಗಳಲ್ಲಿನ ವ್ಯಕ್ತಿಗಳ ಸಂಭಾವ್ಯ ಬೌದ್ಧಿಕ ಸಾಮರ್ಥ್ಯಗಳ ಭಾಗವಾದ ಚಿಂತನಾ ವಿಧಾನಗಳ ಪ್ರಮುಖ ಸಾಂಕೇತಿಕ ರಚನೆಗಳ ಮೇಲೆ ನಾವು ಕೇಂದ್ರೀಕರಿಸಿದ್ದೇವೆ. ಈ ವಿಧಾನಗಳು ಸಾಮಾಜಿಕ ಎನ್ನಲು ಕಾರಣವೆಂದರೆ ಈ ಚಿಂತನೆಗಳನ್ನು ಹುಟ್ಟುಹಾಕುತ್ತಿರುವ ವ್ಯಕ್ತಿಗಳು ತಾವು ಇರುವ ಸಮಾಜವೋ ಸಂಸ್ಥೆಯೋ ಅಥವಾ ಸಮುದಾಯಗಳಿಂದಲೋ ಪ್ರಭಾವಿತರಾಗಿದ್ದಾರೆ. ನಿಸ್ಸಂಶಯವಾಗಿ ಈ ಸಾಮಾಜಿಕ ಪರಿಸ್ಥಿತಿಗಳು ವಿಧಾನಗಳ ಒಳಾಂಶಗಳನ್ನು ಮತ್ತು ಅವು ಎಷ್ಟರ ಮಟ್ಟಿಗೆ ಪ್ರತ್ಯೇಕ ಹಾಗೂ ಭಿನ್ನವಾಗಿವೆ  ಎಂಬುದನ್ನೂ ಪರಿಣಾಮಿಸುತ್ತದೆ. ಹಾಗಿದ್ದಾಗ್ಯೂ ಸಾಕಷ್ಟು ಚಟುವಟಿಕೆಗಳು ಗುಂಪಿನಲ್ಲಿ ಅಥವಾ ಸಮುದಾಯಗಳಲ್ಲಿ ಅಥವಾ ಸಾಮಾಜಿಕವಾಗಿ ನಡೆಯುವಂಥದ್ದೇ ಆಗಿರುತ್ತದೆ. ಇವುಗಳನ್ನು ವ್ಯಕ್ತಿಯು ಮಾಡಿದರೂ ಅದನ್ನು ಗುಂಪಿನ ಹೆಸರಿನಲ್ಲಿ ಮಾಡುತ್ತಾನೆ. ರಾಷ್ಟ್ರ,  ನಗರ, ಸೈನ್ಯ, ಕುಟುಂಬಗಳು ಮತ್ತು ವೈಜ್ಞಾನಿಕ, ಧಾರ್ಮಿಕ ಮತ್ತು ಕಲಾ ಸಂಸ್ಥೆ ಇವುಗಳು ಸಾಮಾಜಿಕ ಅಥವಾ ಸಾಮುದಾಯಿಕ ಸಂಬಂಧಗಳ ಇಲ್ಲವೇ ವಾಸ್ತವಗಳ ಉದಾಹರಣೆಗಳಾಗಿವೆ. ಈ ವಾಸ್ತವಗಳು ಎರಡು ಸಂಬಂಧಿತ ಬಗೆಗಳಲ್ಲಿ ಪ್ರದೇಶಕ್ಕೆ ಬೆಸೆದಿವೆ. ಮೊದಲನೆಯದಾಗಿ, ಸಾಮಾಜಿಕ ಸಂಸ್ಥೆಗಳು ಮತ್ತು ಅದರಲ್ಲಿರುವ ವ್ಯಕ್ತಿಗಳು ಒಂದು 'ಪ್ರದೇಶದ'ಲ್ಲಿದ್ದಾರೆ ಮತ್ತು ಅವುಗಳ ನಡುವಿನ ಅಂತರಕ್ರಿಯೆಗಳೆಲ್ಲವೂ ಸ್ಥಳಕ್ಕೆ ಸಂಬಂಧಿಸಿದಂತೆ (spatial) ಅಭಿವ್ಯಕ್ತಗೊಳ್ಳುತ್ತವೆ. ಇದರಿಂದಾಗಿ ನಾವು ನಗರಗಳಲ್ಲಿ ಕುಟುಂಬಗಳನ್ನು, ಹಲವು ನಗರಗಳನ್ನು ಹೊಂದಿರುವ ಪ್ರಾಂತ್ಯಗಳಲ್ಲಿ ನಗರಗಳನ್ನು ಇನ್ನೂ ಮುಂತಾಗಿ ನಾವು ಕಾಣುತ್ತೇವೆ.ಈ ಸಂಬಂಧಗಳನ್ನು ವಿಶ್ಲೇಷಿಸುವುದು ಸಾಂಪ್ರದಾಯಿಕವಾಗಿ ಸಾಮಾಜಿಕ ಭೂಗೋಳದ ಭಾಗವಾಗಿದೆ ಮತ್ತು ಅವು ಕೇಂದ್ರಸ್ಥಾನ, ಭೂ ಬಳಕೆಯಂತಹ ಸಿದ್ಧಾಂತಗಳು ಮತ್ತು ಗುರುತ್ವ(ನ್ಯೂಟನ್ ನ ಗುರುತ್ವದ ಸಾರ್ವತ್ರಿಕ ನಿಯಮದ ಮೇಲೆ ಆಧಾರಿತವಾಗಿರುವ ಇದು ಎರಡು ನಗರಗಳ ನಡುವಿನ ಅಂತರಕ್ರಿಯೆಯ ಪ್ರಮಾಣವನ್ನು ಅಂದಾಜು ಮಾಡುವ ಮಾದರಿಯಾಗಿದೆ.) ಹಾಗೂ ಸಂಭಾವ್ಯ ಮಾದರಿ (ವಿಭಿನ್ನ ಸ್ಥಳಗಳಲ್ಲಿ ಸಾಮಾಜಿಕ ಅಥವಾ ಆರ್ಥಿಕ ಆಧಾರಿತ ಗುಂಪುಗಳ ನಡುವಿನ ಸಂಭಾವ್ಯ ಅಂತರಕ್ರಿಯೆಯ ತೀವ್ರತೆಯ ಸೂಚ್ಯಾಂಕವಾಗಿದೆ. ಸ್ವಲ್ಪ ಹೆಚ್ಚು ಸಂಕ್ಷಿಪ್ತವಾಗಿ, ಇದು ಜನರ ನಡುವಿನ ಸಂಭಾವ್ಯ ಸಂಪರ್ಕದ ತೀವ್ರತೆಯನ್ನು ಸೂಚಿಸುತ್ತದೆ.) ಗಳನ್ನು ಹುಟ್ಟುಹಾಕಿದೆ.

**Commented [AKAP1]:** Rather than translate into single words, use a cluster of words to translate explanatorily.

ಎರಡನೆಯದಾಗಿ, ಸಾಮಾಜಿಕ ಸಂಸ್ಥೆಗಳು ಸಾಮಾನ್ಯವಾಗಿ ಪ್ರಾದೇಶಿಕವಾಗಿ (territorial) ಇರುತ್ತದೆ. ಈ ಸತ್ಯವನ್ನು ಕೆಲವು ರಾಜಕೀಯ ಭೂಗೋಳಶಾಸ್ತ್ರಜ್ಞರ ಹೊರತಾಗಿ ಹೆಚ್ಚಿನವರು ಇದನ್ನು ನಿರ್ಲಕ್ಷಿಸುತ್ತಾರೆ. ಪ್ರಾದೇಶಿಕತೆ (territoriality) ಎನ್ನುವುದು ಇಲ್ಲಿ ಒಂದು ಸ್ಥಳದಲ್ಲಿ ಒಂದು ಸಾಮಾಜಿಕ ಸಂಸ್ಥೆ ಅಥವಾ ಅದರ ಸದಸ್ಯರು ಇರುವ ವಾಸಸ್ಥಾನ ಮತ್ತು ಅವರ ಸ್ಥಳದ ವ್ಯಾಪ್ತಿ ವಿಸ್ತರಣೆ ಎಂದರ್ಥವಲ್ಲ. ಬದಲಿಗೆ ಒಂದು ಭೌಗೋಳಿಕ ಪ್ರದೇಶವು ಒಂದು ಸಂಸ್ಥೆ ಅಥವಾ ಸಂಸ್ಥೆಯ ಹೆಸರಿನಲ್ಲಿ ಒಬ್ಬ ವ್ಯಕ್ತಿಯ ಅಧಿಕಾರದ

**Commented [AKAP2]:** Check again.

ವ್ಯಾಪ್ತಿ ಅಥವಾ ನಿಯಂತ್ರಣದಲ್ಲಿದೆ ಎನ್ನುವುದರ ಸಮರ್ಥನೆಯಾಗಿದೆ. ಸಾಮಾಜಿಕ ಸಂಸ್ಥೆಯ ಎಲ್ಲ ಸದಸ್ಯರು ಒಂದು ಪ್ರದೇಶದಲ್ಲಿ ನೆಲೆಸಿದ್ದರೂ ಕೂಡ ಎಲ್ಲಾ ಸಾಮಾಜಿಕ ಸಂಸ್ಥೆಗಳು ಈ ರೀತಿಯ ಪ್ರಾದೇಶಿಕ ಸಮರ್ಥನೆಗಳನ್ನು ಮಾಡುವುದಿಲ್ಲ. ಆಸ್ತಿ ಹಕ್ಕು, ರಾಜಕೀಯ ಪ್ರದೇಶಗಳು ಅಥವಾ ಪೌರಸಂಸ್ಥೆ ಮತ್ತು ಸಂಘಟನೆಗಳ ವ್ಯಾಪ್ತಿ ಪ್ರದೇಶದ ರೂಪದಲ್ಲಿನ ಅಂತಹ ಹೇಳಿಕೆಗಳನ್ನು ಸಾಮಾಜಿಕವಾಗಿ ವಿಧಿಸುವುದು (ಮತ್ತು ಸಾಂಸ್ಥೀಕರಣಗೊಳಿಸುವುದು) ಮೊದಲ ಪ್ರಕಾರದ ಸ್ಥಳಕ್ಕೆ ಸಂಬಂಧಿಸಿದ ಗುಣಗಳನ್ನು ವ್ಯಕ್ತಪಡಿಸುವ ಸಾಮಾಜಿಕ ಸಂಗತಿಗಳಿಗೆ ಅಗತ್ಯವಾದ ಸಂದರ್ಭವನ್ನು ಒದಗಿಸುತ್ತದೆ. ಇಂತಹ ಪ್ರಾದೇಶಿಕ ರಚನೆಗಳು ತೆಗೆದುಕೊಳ್ಳುವ ರೂಪಗಳು ಮತ್ತು ನಿರ್ವಹಿಸುವ ಕಾರ್ಯಗಳು ಆಯಾ ಪ್ರದೇಶದ ರಾಜಕೀಯ ಆರ್ಥಿಕತೆಯ ಸ್ವರೂಪವನ್ನು ಅವಲಂಬಿಸಿದೆ.

**Commented [AKAP3]:** Alter.

ಸಾಮಾಜಿಕ ಸಂಗತಿಗಳ ಸ್ಥಳಕ್ಕೆ ಸಂಬಂಧಿಸಿದ ಸಂಬಂಧಗಳು ಮತ್ತು ಪ್ರಾದೇಶಿಕತೆ ಈ ಎರಡೂ ಪ್ರದೇಶದ ಬಗೆಗಿನ ವಿಭಿನ್ನ ಪರಿಕಲ್ಪನೆಗಳನ್ನು ಒಳಗೊಂಡಿರುತ್ತವೆ. ಇವನ್ನು ನಾವು *'ಸಾಮಾಜಿಕ ಪರಿಕಲ್ಪನೆಗಳು'* ಎಂದು ಹೆಸರಿಸೋಣ. ಪ್ರದೇಶದ ಸಾಮಾಜಿಕ ಪರಿಕಲ್ಪನೆಯನ್ನು ಒಟ್ಟಾಗಿ ಅದು ಸಮಾಜದ ರಾಜಕೀಯ–ಆರ್ಥಿಕ ಸಂರಚನೆಗಳೊಂದಿಗೆ ಹೊಂದಿರುವ ಸಂಬಂಧಗಳ ಮೂಲಕ ಅವಲೋಕಿಸೋಣ.

## ಮಿಶ್ರ ಮಾರ್ಗಗಳು

ನಾವು ಸಾಮಾಜಿಕ ವ್ಯವಸ್ಥೆಗಳನ್ನು ಅದರ ಆದಿಮ ಸಮಾಜಗಳಿಂದ ಹಿಡಿದು ಇಂದಿನ ನಾಗರಿಕತೆಗಳವರೆಗೆ ಒಂದು ಸಾಮಾನ್ಯ ವಿಕಸನದ ರೂಪರೇಖೆಯಲ್ಲಿ ವಿಂಗಡಿಸಿದಾಗ ಪ್ರದೇಶದ ಪರಿಕಲ್ಪನೆಗಳ ಬಗ್ಗೆ ಅತ್ಯಂತ ಹೆಚ್ಚಿನ ವ್ಯತ್ಯಾಸಗಳನ್ನು ಸಮಾಜಗಳ ಮಟ್ಟದಲ್ಲಿ ಕಾಣಬಹುದು ಮತ್ತು ಅವುಗಳಲ್ಲಿ ಕೆಲವಷ್ಟು ನಾಗರಿಕತೆಗಳು ಇಂದಿನ ಆಧುನಿಕ ರಾಷ್ಟ್ರಗಳಾಗಿ ವಿಕಾಸ ಹೊಂದಿವೆ. (ಆದಿಮ ಹಂತದಿಂದ ಆಧುನಿಕ ನಾಗರಿಕತೆಯೆಡೆಗಿನ ಪರಿವರ್ತನೆಯ ಹಾದಿಯಲ್ಲಿ ಪಾಳೆಗಾರಿಕೆಯಂತಹ ನಡುವಿನ ಹಂತಗಳನ್ನು ನಾವು ಈ ಚರ್ಚೆಯಲ್ಲಿ ಪರಿಗಣಿಸುವುದು ಬೇಡ.)

ಪ್ರದೇಶಗಳ ಸಾಮಾಜಿಕ ಪರಿಕಲ್ಪನೆಗೆ ಎರಡು ಮೂಲ ಗುಣಲಕ್ಷಣಗಳಿವೆ ಅದೂ ರಾಜಕೀಯ ಆರ್ಥಿಕ ಸಂರಚನೆಗಳ ಮಟ್ಟದಲ್ಲಿ. ಅವು ಆದಿಮ ಮತ್ತು ನಾಗರಿಕ ಸಮಾಜಗಳ ನಡುವಿನ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಪ್ರದೇಶದ ಕಲ್ಪನೆಯ ಬಗ್ಗೆ ಇರುವ ಭಿನ್ನ ದೃಷ್ಟಿಕೋನಗಳನ್ನು ಸ್ಪಷ್ಟವಾಗಿ ವಿವರಿಸುತ್ತವೆ. ಮೊದಲನೆಯ ಗುಣಲಕ್ಷಣವು ಸಮಾಜ ಮತ್ತು ಭೌಗೋಳಿಕ ನೆಲದ ನಡುವಿನ ಸಂಬಂಧದ ಬಗ್ಗೆ ಜನರು ಹೊಂದಿರುವ ಪರಿಕಲ್ಪನೆ. ಬೇರೆ ಎಲ್ಲದರಂತೆ ಸಮಾಜಗಳೂ ಕೂಡ ಒಂದು ಸ್ಥಳದಲ್ಲಿ ಬೇರೂರಿರುತ್ತವೆ. ಹಾಗಾಗಿ ಮೊದಲ ಗುಣಲಕ್ಷಣವು ಈ ಸಂಬಂಧದ ಬಗೆಗಿನ ಜನರ ಪರಿಕಲ್ಪನೆಯನ್ನು ಸೂಚಿಸುತ್ತದೆ. ಸಮಾಜಗಳು ಅವು ನೆಲೆಗೊಂಡಿರುವ ಜಾಗಗಳ ಬಗ್ಗೆ ತುಂಬಾ ಪ್ರಬಲವಾದ ಬಂಧಗಳನ್ನು ಕಟ್ಟಿಕೊಳ್ಳುವ ಮತ್ತು ಈ ಬಂಧಗಳನ್ನು ಸಾಮಾಜಿಕ ಸಂಸ್ಥೆಗಳು ಮತ್ತು ರೀತಿನೀತಿಗಳ ಮೂಲಕ ಗೊತ್ತುಪಡಿಸುವ ಪ್ರವೃತ್ತಿಯನ್ನು ಹೊಂದಿರುತ್ತವೆ. ಬೇರೆ ಬೇರೆ ಸಮಾಜಗಳು ಸ್ಥಳದ ಬಗೆಗಿನ ಈ ಬಂಧಗಳನ್ನು ವಿಭಿನ್ನ ರೀತಿಯಲ್ಲಿ ಪರಿಭಾವಿಸುತ್ತವೆ. ಕೆಲವು ಆದಿಮ ಸಮಾಜಗಳಲ್ಲಿ ಸಾಮಾಜಿಕ ವ್ಯವಸ್ಥೆಯು ಭೌತಿಕ ಪ್ರದೇಶದಲ್ಲಿ

**Commented [AKAP4]:** Difficult to track the reference. Better to state it again.

ನಿರಂತರ ವಿಸ್ತರಣೆಯನ್ನು ಹೊಂದಿದೆ ಎಂದು ಭಾವಿಸುವುದಿಲ್ಲ. ಬದಲಾಗಿ ಪವಿತ್ರ ಸ್ಥಳಗಳು, ನೀರಿನ ಆವಾಸಸ್ಥಾನಗಳು ಮತ್ತು ಪಾರಂಪರಿಕ ವಾಸಸ್ಥಾನಗಳಂತಹ ಭೂಮಿಯ ಮೇಲಿನ ವಿಶೇಷ ಸ್ಥಾನಗಳು ಸಮಾಜಕ್ಕೆ ಆಸರೆಯಾಗಿರುತ್ತವೆ. ಅವುಗಳ ನಡುವಿನ ಪ್ರದೇಶಗಳು, ಸಮಾಜದ ಸದಸ್ಯರಿಗೆ ಗೊತ್ತಿದ್ದರೂ ಕೂಡ, ಪ್ರಾದೇಶಿಕ ಅರ್ಥದಲ್ಲಿ ಅವರಿಗೆ ಅದು ಮುಖ್ಯವಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಪ್ರಾದೇಶಿಕ ಗಡಿಗಳು ಅಷ್ಟು ಸ್ಪಷ್ಟವಾಗಿರುವುದಿಲ್ಲ. ಇತರ ಸಮಾಜಗಳಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಪ್ರಾದೇಶಿಕವಾಗಿ ವಿಸ್ತೃತವಾಗಿ ಹರಡಿರುವ ಒಂದು ವಿಷಯವಾಗಿ ಕಲ್ಪಿಸಿಕೊಳ್ಳಬಹುದು ಮತ್ತು ಗಡಿಗಳು ತಕ್ಕಮಟ್ಟಿಗೆ ಸ್ಪಷ್ಟವಾಗಿ ಗುರುತಿಸಲ್ಪಟ್ಟಿದ್ದು ಅದು ಪ್ರಾದೇಶಿಕವಾಗಬಹುದು. ನಾಗರಿಕ ಸಮಾಜಗಳಲ್ಲಿ ಸಮಾಜದ ಕೆಲವು ಭಾಗಗಳು ನಿರಂತರ ವಿಸ್ತರಣೆಯನ್ನು ಹೊಂದಿರುವಂತೆ ಕಂಡುಬರುತ್ತದೆ. ಆದರೆ ಯಾವ ಭಾಗಗಳು ಮತ್ತು ಎಷ್ಟು ಸ್ಪಷ್ಟವಾಗಿ ಅದರ ಗಡಿಗಳು ಗುರುತಿಸಲ್ಪಟ್ಟಿದೆ ಎಂಬುದು ಸಮಾಜದಿಂದ ಸಮಾಜಕ್ಕೆ ಬದಲಾಗುತ್ತಿರುತ್ತದೆ.

ಪ್ರದೇಶದ ಬಗೆಗಿನ ಸಾಮಾಜಿಕ ಪರಿಕಲ್ಪನೆಯ ಎರಡನೆಯ ಗುಣಲಕ್ಷಣವೆಂದರೆ ಇತರ ಜನ ಮತ್ತು ಸ್ಥಳಗಳ ಬಗ್ಗೆ ಜನರು ಯಾವ ರೀತಿಯ ತಿಳುವಳಿಕೆ ಮತ್ತು ಮನೋಭಾವನೆಗಳನ್ನು ಹೊಂದಿದ್ದಾರೆ ಎನ್ನುವುದು. ಈ ಸಂದರ್ಭಗಳಲ್ಲಿ ನಾವು ಸ್ಥಳಕ್ಕೆ ಸಂಬಂಧಿಸಿದ ಒಂದು ವಿಸ್ತಾರವಾದ ದೃಷ್ಟಿಕೋನದ ಬಗ್ಗೆ ಹೆಚ್ಚು ಉತ್ಸುಕರಾಗಿರುತ್ತೇವೆಯೇ ಹೊರತು ಜ್ಞಾನದ ಒಳಾಂಶ ಅಥವಾ ನಿರ್ದಿಷ್ಟ ವಿವರಗಳ ಬಗ್ಗೆ ಅಲ್ಲ. [...] ಉದಾಹರಣೆಗೆ, ಸಾಕಷ್ಟು ಆದಿಮ ಸಮಾಜಗಳಲ್ಲಿ ತಮ್ಮದಲ್ಲದೇ ಇತರ ಜನಾಂಗ ಮತ್ತು ಸ್ಥಳಗಳ ಬಗ್ಗೆ ಯಾವುದೇ ತಿಳುವಳಿಕೆ ಹೊಂದಿರುವುದಿಲ್ಲ. ಅವರ ದೃಷ್ಟಿಕೋನವು ಜನಾಂಗ ಕೇಂದ್ರಿತವಾಗಿದ್ದು ಪ್ರದೇಶವೆಂದರೆ ಅವರಿಗೆ ತಾವು ವಾಸಿಸುವ ಸ್ಥಳ ಅಥವಾ ಭೂಭಾಗವೇ ಆಗಿರುತ್ತದೆ. ಅವರ ಸ್ಥಳಗಳಿಂದಾಚೆ ಇರುವ ಪ್ರದೇಶದ ಕಲ್ಪನೆ ಅವರಲ್ಲಿ ಇರುವುದಿಲ್ಲ. ಇತರ ಕೆಲವು ಆದಿಮ ಸಮಾಜಗಳು ಇತರ ಸ್ಥಳಗಳು ಮತ್ತು ಜನರ ಬಗ್ಗೆ ಸ್ವಲ್ಪ ಹೆಚ್ಚು ಮಟ್ಟಿನ ವಿಸ್ತೃತ ಪರಿಕಲ್ಪನೆಗಳನ್ನು ಹೊಂದಿರಲೂಬಹುದು. ತಮ್ಮ ಪ್ರದೇಶದ ಗಡಿಯಲ್ಲಿ ಯಾವ ಭಾಗದದಲ್ಲಿ ವಿವಿಧ ಜನಾಂಗಗಳು ಇವೆ ಎನ್ನುವುದು ತಿಳಿದಿರಬಹುದು. ಆದರೆ, ಇದರ ಹೊರತು ಅವರ ನೆರೆಯ ಜನಾಂಗದ ಪ್ರಾದೇಶಿಕ ವ್ಯಾಪ್ತಿ ಮತ್ತು ಅದರಿಂದಾಚೆಯದರ ಬಗ್ಗೆ ಏನೂ ಗೊತ್ತಿಲ್ಲದಿರಬಹುದು. ಊಳಿಗಮಾನ್ಯ ಪದ್ಧತಿಯಂಥ ಸಮಾಜಗಳನ್ನು ಹೊರತುಪಡಿಸಿ ಉಳಿದ ನಾಗರಿಕತೆಗಳಲ್ಲಿ ಸಾಮಾನ್ಯವಾಗಿ ತಮ್ಮ ಪ್ರದೇಶದ ಆಚೆಗಿರುವುದರ ಬಗ್ಗೆ ಹೆಚ್ಚು ಸ್ಪಷ್ಟ ನೋಟ ಹೊಂದಿರುವುದನ್ನು ಕಾಣುತ್ತೇವೆ; ಈ ನೋಟವು ಒಂದು ಪ್ರಕ್ಷೇಪಕ ಅಥವಾ (Euclidean space)ನ ಪರಿಕಲ್ಪನೆಗೆ (ಸ್ಥಳ ಅದು ಅನಂತ, ಏಕರೂಪದ ಮತ್ತು ಸಮತಟ್ಟನದು ಎನ್ನುವ ಪರಿಕಲ್ಪನೆ) ಅನುಗುಣವಾಗಿದೆ.[...]

ಈ ಎರಡು ಗುಣಲಕ್ಷಣಗಳು ಅವುಗಳ ಸಂಕೀರ್ಣತೆಯ ಮಟ್ಟಕ್ಕೆ ಸಂಬಂಧಿಸಿದಂತೆ ಹೆಚ್ಚುಕಡಮೆ ಪರಸ್ಪರ ಸಂಬಂಧವನ್ನು ಹೊಂದಿದ್ದು ಈ ಮಟ್ಟಗಳು ಹೆಚ್ಚುಕಡಮೆ ಆದಿಮ ಮತ್ತು ನಾಗರಿಕ ಎಂಬ ಸಾಮಾಜಿಕ ವಿಭಜನೆಗೆ ಸಂಬಂಧಿಸಿದ್ದಾಗಿರುತ್ತದೆ. ಯಾವ ಸಮಾಜಗಳು ಹೆಚ್ಚಾಗಿ ಸರಳ ಮತ್ತು ನಿಷ್ಕಪಟ ನಂಬಿಕೆಗಳನ್ನು ಆಧರಿಸಿದೆಯೋ ಆ ಸಾಮಾಜಿಕ ವ್ಯವಸ್ಥೆಗಳು ಹೆಚ್ಚು ಪುರಾಣೀಕೃತವಾಗಿರುತ್ತವೆ ಮತ್ತು ಪುರಾಣ–ಮಾಯೆ ವಿಧಾನಗಳ ಮೂಲಕ ಸ್ಥಳಕ್ಕೆ ಸಂಬಂಧ ಹೊಂದಿರುತ್ತವೆ. ಹಾಗೆಯೇ, ಸಮಾಜವನ್ನು ಸುತ್ತುವರೆದಿರುವ ಪ್ರದೇಶದ ಪರಿಕಲ್ಪನೆಯನ್ನೂ ಇದೇ ರೀತಿಯಲ್ಲಿ ನೋಡುತ್ತದೆ ಮತ್ತು ವಾಸ್ತವವಾಗಿ ಅದರೊಳಗೆ ಮುಳುಗಿ

**Commented [AKAP5]:** Find a more natural alternative to convey the idea better.

**Commented [AKAP6]:** Find a better alternantive to understand what kind of entetities are those that have a greater permamnence or connuity. In English, one can say, some aspects, etc. In kannada, we may need a slightly more elaborate translation.

**Commented [AKAP7]:** Subject of the sentence missing.

ಹೋಗಿರುತ್ತದೆ. ಎಲ್ಲ ನಾಗರಿಕತೆಗಳಲ್ಲಿ (ಎಲ್ಲಾ ನಾಗರಿಕತೆಗಳಿಗೂ ವಿಸ್ತೃತವಾದ ಸಂಕೀರ್ಣ ಚಿಂತನಾ ವಿಧಾನಗಳಿವೆ), ಸಮಾಜವನ್ನು ಒಂದು ಸ್ಥಳಕ್ಕೆ ಹಿಡಿದಿಡುವುದು ಮತ್ತು ಇತರ ಸ್ಥಳಗಳೊಂದಿಗೆ ಸಮಾಜ ಹೊಂದಿರುವ ಸಂಬಂಧ – ಇವೆರಡನ್ನು ಒಂದು ಸಂಕೀರ್ಣ ಮಾದರಿಯಾಗಿ ಕಾಣಬಹುದು. ಆದರೆ ಇಂತಹ ಸಮಾಜಗಳು ಸರಳ ವಿಧಾನಗಳನ್ನು ಸಹ ಒಳಸೇರಿಸಿಕೊಂಡಿರುತ್ತವೆ. ಯಾವ ಮಾದರಿಯು ಮೇಲುಗೈ ಪಡೆಯುತ್ತದೆ ಎಂಬುದನ್ನು ಆ ಸಮಾಜದ ನಿರ್ದಿಷ್ಟ ರಚನೆ ಮತ್ತು ಇತರ ಸಮಾಜದೊಂದಿಗಿನ ಅದರ ಸಂಬಂಧದ ಮೇಲೆ ಆಧಾರಿತವಾಗಿರುತ್ತದೆ.

Commented [AKAP8]: Incomplete.

## ಆದಿಮ

[...] ಆದಿಮ ಎಂದು ಗುರುತಿಸಲ್ಪಡುವ ಸಮಾಜವು ಸುಮಾರು 7–8000 ವರ್ಷಗಳ ಹಿಂದೆ ಪುರಾತನ ನಾಗರೀಕತೆಗಳು ಹುಟ್ಟುವ ಮುನ್ನ ಇದ್ದಂತಹ ಸಮಾಜಗಳು. ಅಂತಹ ಯಾವುದೇ ಸಮಾಜಗಳು ಗಮನಿಸಲೂ ಇಂದು ಉಳಿದಿಲ್ಲ. ಪುರಾತತ್ವ ಶಾಸ್ತ್ರದಿಂದ ಪುನಾರಚಿಸಿದ ಹಾಗೂ ಉತ್ಖನನಗಳಿಂದ ಕಂಡ ಸಮಾಜಗಳಲ್ಲಿನ ತಂತ್ರಜ್ಞಾನಗಳಿಗೆ ಹೋಲಿಕೆ ಇರುವ ಅಕ್ಷರಪೂರ್ವ ಸಮಾಜಗಳ ಬಗ್ಗೆ ಮಾಡಿದ ಮಾನವಶಾಸ್ತ್ರದ ಕ್ಷೇತ್ರ ಕಾರ್ಯಗಳು ತೋರಿದ ವಿಷಯಗಳಿಂದ ನಮ್ಮ ಕಾಣ್ಕೆಗಳು ಮೂಡಿವೆ. ಆಧುನಿಕ ಮಾನವಶಾಸ್ತ್ರಜ್ಞರು ಅಧ್ಯಯನ ಮಾಡಿರುವ 'ಆದಿಮ' ಸಮಾಜಗಳು ಈ ಕಳೆದ 8000 ವರ್ಷಗಳಲ್ಲಿ ಬದಲಾಗಿದ್ದರೂ ಮತ್ತು ಹೆಚ್ಚು ಅಭಿವೃದ್ಧಿ ಹೊಂದಿದ ಸಮಾಜಗಳೊಂದಿಗೆ ಸಂಪರ್ಕ ಹೊಂದಿದ್ದರೂ ಸಹ ಅವರ ತಾಂತ್ರಿಕತೆಗಳು ಮತ್ತು ಸಾಮಾಜಿಕ ಸಂರಚನೆಗಳು ಆಧುನಿಕ ತಾಂತ್ರಿಕತೆಗಳಿಗಿಂತ ಆಮೂಲಾಗ್ರವಾಗಿ ಭಿನ್ನವಾಗಿದ್ದು ಪುರಾತತ್ವ ಅವಶೇಷಗಳಿಂದ ನಾವು ತಿಳಿದಿರುವ ಪುರಾತನ ಸಮಾಜಗಳಿಗೆ ಹತ್ತಿರವಿವೆ. ಆದ್ದರಿಂದ, ಸೂಕ್ತ ಮುನ್ನೆಚ್ಚರಿಕೆಗಳೊಂದಿಗೆ, ಹಿಂದಿನ ಸಮಾಜಗಳ ಗುಣಲಕ್ಷಣಗಳನ್ನು ಸಮಂಜಸವಾಗಿ ನಿರೂಪಿಸಲು ನಾವು ಇಂದಿನ ಜನಾಂಗ ಶಾಸ್ತ್ರದ ದತ್ತಾಂಶಗಳನ್ನು ಪುರಾವೆಗಳಾಗಿ ಬಳಸಬಹುದಾಗಿದೆ. ಮುಖ್ಯವಾಗಿ ನಾವು ಆದಿಮವನ್ನು ನಾಗರೀಕತೆಗಳಿಂದ ಪ್ರತ್ಯೇಕಿಸುವಂತಹ ಮತ್ತು ಪ್ರದೇಶದ ಬಗೆಗಿನ ಅವುಗಳ ಸಾಮಾಜಿಕ ದೃಷ್ಟಿಕೋನವನ್ನು ಸ್ಪಷ್ಟವಾಗಿ ವಿವರಿಸುವಂತಹ ಗುಣಲಕ್ಷಣಗಳೆಡೆಗೆ ಗಮನವೀಯೋಣ.

ಆದಿಮ ಗುಂಪುಗಳು ನಾಗರೀಕತೆಗಳಷ್ಟು ಸಂಕೀರ್ಣವಾಗಿಲ್ಲ. ಅವು ಅತ್ಯಲ್ಪ ಕಾಯಕ ವಿಭಜನೆ, ಆಂತರಿಕ ವಿಶೇಷಜ್ಞತೆ, ಕಡಮೆ ಸಂಖ್ಯೆಗಳು ಮತ್ತು ಪುಟ್ಟ ಪ್ರದೇಶಗಳನ್ನು ಹೊಂದಿರುತ್ತವೆ. ಆದರೆ ಅವುಗಳಲ್ಲೇ ವಿವಿಧ ಮಟ್ಟದ ಸಂಕೀರ್ಣತೆ ಇರುತ್ತದೆ. ಬೇಟೆ ಮಾಡುವ ಮತ್ತು ಆಯುವ ತಂಡಗಳು ಮತ್ತು ಕುಲಗಳಿಂದ ಹಿಡಿದು ಹೆಚ್ಚು ಸಂಕೀರ್ಣ ಬುಡಕಟ್ಟು ಸಮಾಜಗಳು ಮತ್ತು ಪ್ರಾಯಶಃ ಆದಿಮ ಸಾಮಾಜಿಕ ಸಂರಚನೆಯಲ್ಲೇ ಅತೀ ಉನ್ನತ ರೂಪಗಳಾದ ಈಶಾನ್ಯ ಅಮೆರಿಕದ ಇರೊಕ್ವಾಸ್ (Iroquois) ಅಥವಾ ನ್ಯೂಜಿಲೆಂಡ್‌ನ ಮಾವೋರಿ (Maori)ಗಳಂತಹ ರಚನೆಯವರೆಗೂ ಇವೆ. ಎಲ್ಲ ಆದಿಮ ಗುಂಪುಗಳಲ್ಲೂ ಕುಟುಂಬವೇ ಮೂಲ ಘಟಕ ಮತ್ತು ಅನೇಕ ವೇಳೆ ಇದಕ್ಕಿಂತ ಹೆಚ್ಚು ಉನ್ನತ ಸಾಮಾಜಿಕ ಘಟಕವು ತಂಡವಾಗಿರುತ್ತದೆ.

ಹೆಚ್ಚಿನಂಶ ಬೇಟೆಗಾರ ಮತ್ತು ಆಯುವವರ ತಂಡಗಳು ಅಲೆಮಾರಿ ಗುಂಪುಗಳಾಗಿರುತ್ತವೆ. ಒಂದು ತಂಡವು ಪ್ರತಿಯೊಂದು ಋತುಮಾನಕ್ಕೂ ಭಿನ್ನ ಪರಿಸರ ಆವಾಸಸ್ಥಳಗಳನ್ನು ಹೊಂದಿರಬಹುದು. ಅವರ ಗುಂಪಿನ ಸಂಖ್ಯೆಯು ಎಂದಿಗೂ ಒಂದು ಪುಟ್ಟ ಪಟ್ಟಣದಷ್ಟೂ ಇರಲಾರದು. ಹಾಲಿ ಬೇಟೆಗಾರ ಮತ್ತು ಆಯುವವರ ಗುಂಪುಗಳಲ್ಲಿ ಬಹುಶಃ ಎಸ್ಕಿಮೊಗಳೇ ಅತಿದೊಡ್ಡ ಹಳ್ಳಿಗಳನ್ನು ಹೊಂದಿದವರಾಗಿದ್ದಾರೆ. ಉತ್ತಮ ಬೇಟೆ ದೊರೆಯುವ ಕೆಲವೆಡೆ ನೂರಾರು ನಿವಾಸಿಗಳು ಇದ್ದಾರೆ. ಆದರೆ ಬಹಳಷ್ಟು ಹಳ್ಳಿಗಳು ಪುಟ್ಟವು. ಅವರ ಬಳಿ ಇರುವ ಆದಿಮ ತಾಂತ್ರಿಕತೆಗಳು ಅವರ ವಯಸ್ಸು ಮತ್ತು ಲಿಂಗ ಆಧಾರದಿಂದಾಚೆಗಿನ ಕೆಲಸದ ವಿಭಜನೆ ಮತ್ತು ವೈಶಿಷ್ಟ್ಯತೆಗಳಿಗೆ ಅನುವು ಮಾಡಿಕೊಡುವುದಿಲ್ಲ. ಅವರ ಅಲೆಮಾರಿ ಜೀವನವು ಕುಟುಂಬವನ್ನು ಅವರ ಸಮಾಜಗಳ ಆವಶ್ಯಕ ತಿರುಳಾಗಿಸುತ್ತದೆ. ಮೂಲ ಕುಟುಂಬದ ಆಚೆಗಿನ ಸಂಬಂಧಗಳು ನೆಂಟಸ್ತಿನ ಪರಿಕಲ್ಪನೆಗಳ ಮೂಲಕ ಸ್ಥಾಪಿತವಾಗುತ್ತದೆ.

ಒಂದು ಬುಡಕಟ್ಟು ಒಂದು ತಂಡಕ್ಕಿಂತಲೂ ಸಂಕೀರ್ಣವಾಗಿರುತ್ತದೆ. ವಿವಿಧ ಆವಾಸಸ್ಥಾನಗಳಲ್ಲಿ ಇರುವ ಮತ್ತು ವಿಭಿನ್ನ ಆರ್ಥಿಕತೆ ಮತ್ತು ಜನಸಂಖ್ಯೆಗಳನ್ನು ಹೊಂದಿರುವುದನ್ನು ಬುಡಕಟ್ಟು  ಎಂಬ ಪದವು ಪ್ರತಿನಿಧಿಸುತ್ತದೆ. ತಂಡಗಳಲ್ಲಿನಂತೆ ಬುಡಕಟ್ಟುಗಳಲ್ಲೂ ಕೂಡ ಕುಟುಂಬವೇ ಮೂಲ ಘಟಕವಾಗಿರುತ್ತದೆ. ಆದಾಗ್ಯೂ, ಬುಡಕಟ್ಟುಗಳಲ್ಲಿ ನೆಂಟಸ್ತನದ ಸಂಬಂಧಗಳು ತಂಡಗಳಿಗಿಂತ ನಿಖರ ಮತ್ತು ವ್ಯಾಪಕವೂ ಆಗಿರುತ್ತದೆ. ಬುಡಕಟ್ಟು ಹಾಡಿಗಳು ಏಕ ಮೂಲ ಕುಟುಂಬಗಳಾಗಿ ಮಾತ್ರ ಇರಬಹುದು ಆದರೆ ಕೌಟಿಂಬಿಕ ಕೃಷಿಯಲ್ಲಿ (subsistence farming) ತೊಡಗಿಸಿಕೊಂಡಿರುವ ಬುಡಕಟ್ಟು ಗುಂಪುಗಳನ್ನು ಹೊಂದಿರುವ ಹಳ್ಳಿಗಳ ಸರಿಸುಮಾರಿನ ಗಾತ್ರದ ಅಂದಾಜು 1–200 ಇರುತ್ತದೆ. ಅಧಿಕ ಪ್ರಮಾಣದಲ್ಲಿ ಶ್ರಮ ಮತ್ತು ಬಂಡವಾಳವನ್ನು ಬಳಸಿ ಕೃಷಿ ಮಾಡುವ (intensive farming) ಜಾಗಗಳಲ್ಲಿ ಬುಡಕಟ್ಟು ಹಾಡಿಗಳ ಜನಸಂಖ್ಯೆ 1500ರಷ್ಟು ದೊಡ್ಡದಿರಬಹುದು.

ಈ ಬುಡಕಟ್ಟುಗಳಲ್ಲಿ ತಂಡಗಳು ಅಥವಾ ಕುಲಗಳಿಗಿಂತಲೂ ಹೆಚ್ಚು ವಿಭಾಗಿಸಲಾದ ಸಾಮಾಜಿಕ ವ್ಯವಸ್ಥೆ ಇದೆ. ಆದರೆ ನಾವು ನಾಗರಿಕ ಸಮಾಜಗಳಾಗುವವರೆಗೂ ಅಲ್ಲಿ ಯಾವುದೇ ನಿಜವಾದ ಆರ್ಥಿಕ *'ವರ್ಗಗಳು'* ಇರಲಿಲ್ಲ.  ಬುಡಕಟ್ಟು ಸಮಾಜಗಳು ಹೆಚ್ಚಾಗಿ ವಯಸ್ಸು ಮತ್ತು ಲಿಂಗ ಆಧಾರಿತ ಕಾಯಕದ ವಿಭಜನೆಗಳನ್ನೇ ಇನ್ನೂ ಹೊಂದಿವೆ. ಬುಡಕಟ್ಟು ಸಮಾಜಗಳಲ್ಲಿ ಸಮುದಾಯದ ಜೀವನವು ಕುಟುಂಬ ಆಧಾರಿತವಾಗಿದೆ. ಸಮುದಾಯವು ಸದಸ್ಯರಲ್ಲಿ ಒಂದು ಆತ್ಮೀಯ ಮತ್ತು ಅವರು ಅದರ ಅವಿಭಾಜ್ಯ ಭಾಗ ಎನ್ನುವ ಭಾವನೆಯನ್ನು ಮೂಡಿಸುತ್ತದೆ. ಈ ಘಟಕದ **'ಸಹಜತೆಯೇ'** ಆದಿಮ ಸಮಾಜಗಳ ಒಂದು ಗಮನಾರ್ಹ ಅಂಶ. ಒಗ್ಗಟ್ಟಾದ ಸಮುದಾಯ ಎಂಬ ಭಾವನೆ **'ಸಮಾನ ಮೂಲಗಳಿಂದ ಹೊಮ್ಮುತ್ತದೆ, ಪರಸ್ಪರ ಸ್ಪಂದಿಸುವ ವ್ಯಕ್ತಿಗಳಿಂದ ಕೂಡಿರುತ್ತದೆ ಮತ್ತು ಒಳಗಿಂದಲೇ ಬೆಳೆಯುತ್ತದೆ'**, ಎಂದು ಡೈಮಂಡ್ (Diamond) ಹೇಳುತ್ತಾರೆ. ಈ ಸಾಮುದಾಯಿಕ ಭಾವನೆಯು ಆದಿಮ ಸಮಾಜಗಳಲ್ಲಿ ಕುಟುಂಬವನ್ನು ಸಮಾಜ ಮತ್ತು ಜಗತ್ತಿನೊಂದಿಗಿನ ಅದರ ಸಂಬಂಧಗಳನ್ನು ಒಂದಕ್ಕೊಂದು ಸಾದೃಶವಾಗಿ ನೋಡಲಾಗುವ ಪ್ರವೃತ್ತಿ ಹೊಂದಿರುವುದರಿಂದ ಅದು ಗಟ್ಟಿಯಾಗುತ್ತದೆ. ಕುಟುಂಬದ ಈ ಸಾದೃಶ್ಯವು ಆದಿಮರ ಪ್ರಕೃತಿಯ ಏಕತೆಯ ಸಾಮಾನ್ಯ ದೃಷ್ಟಿಕೋನಕ್ಕೆ ಅನ್ವಯಿಸುತ್ತಾ ವಿಸ್ತರಿಸುತ್ತದೆ. ಅದು ವ್ಯಕ್ತಿತ್ವವಾದ (personalism -

ವ್ಯಕ್ತಿತ್ವವಾದವು ಅಂತಿಮ ವಾಸ್ತವ ಮತ್ತು ಮೌಲ್ಯವನ್ನು ಮಾನವ ಮತ್ತು ದೈವಿಕದ ವ್ಯಕ್ತಿತ್ವದಲ್ಲಿ ಇರಿಸುತ್ತದೆ. ಅದು ವ್ಯಕ್ತಿಯ ಮಹತ್ವ, ಅನನ್ಯತೆ ಮತ್ತು ಪವಿತ್ರತೆಗೆ ಪ್ರಾಮುಖ್ಯತೆ ನಿಡುವುದಲ್ಲದೆ ವ್ಯಕ್ತಿಯ ಆವಶ್ಯಕ ಸಾಪೇಕ್ಷತೆ ಮತ್ತು ಸಾಮಾಜಿಕ ಆಯಮಕ್ಕೆ ಒತ್ತು ನೀಡುತ್ತದೆ.) ವನ್ನು ಸೃಷ್ಟಿಸಿ ಪ್ರಕೃತಿಗೂ ಅನ್ವಯಿಸುತ್ತದೆ ಮತ್ತು ಇದು ಆದಿಮ ಚಿಂತನೆ ಮತ್ತು ವರ್ತನೆಗೆ ಆಧಾರವಾಗಿದ್ದು ಬಹುಶಃ ಅದರ ವಿಶಿಷ್ಟ ಅಂಶ ಎಂದೆನ್ನಬಹುದು.

ವ್ಯಕ್ತಿ ಮತ್ತು ಸಮುದಾಯ ಇವುಗಳ ನಡುವಿನ ಆತ್ಮೀಯ ಸಂಬಂಧವು ವ್ಯಕ್ತಿಪ್ರತ್ಯೇಕತೆ ಮತ್ತು ವೈಯಕ್ತಿಕ ಅಭಿವ್ಯಕ್ತಿಗೆ ತಡೆಹಾಕುವುದಿಲ್ಲ. ಅನೇಕ ಸಂಶೋಧಕರ ಪ್ರಕಾರ, ವಾಸ್ತವವಾಗಿ ನಾಗರಿಕ ಸಮಾಜಗಳಿಗಿಂತಲೂ ಇಂತಹ ಆದಿಮ ಸಮಾಜಗಳಲ್ಲಿ ವ್ಯಕ್ತಿ ಅಭಿವ್ಯಕ್ತಿಗಳನ್ನು ಅಂಗೀಕರಿಸುವ  ಹೆಚ್ಚು ಸಾಧ್ಯತೆಗಳಿವೆ.

ವ್ಯಕ್ತಿಗಳು ಸಮುದಾಯದೊಂದಿಗಿನ ತಮ್ಮ ಸಂಬಂಧವನ್ನು ಹೇಗೆ ಪರಿಗಣಿಸುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಠಿಣ. ಆದಿಮ ಸಮಾಜಗಳಲ್ಲಿ ವ್ಯಕ್ತಿ ಮತ್ತು ಸಮಾಜದ ನಡುವಿನ ಬಂಧವು ಅಸಾಮಾನ್ಯ ಮತ್ತು ಅಸಾಧಾರಣವೆನ್ನುವಷ್ಟು ಹತ್ತಿರ ಎಂದು ಹೆಚ್ಚಿನ ಸಂಶೋಧಕರು ಒಪ್ಪುತ್ತಾರೆ.  ಈ ಅನಿಸಿಕೆಯು ವ್ಯಕ್ತಿಗಳು ಕೆಲವು ವಿಷಯಗಳಲ್ಲಿ ತಾವು ಗುಂಪಿನಿಂದ ಪ್ರತ್ಯೇಕ ಎಂಬುದಾಗಿ ಪರಿಕಲ್ಪಿಸಿಕೊಳ್ಳುವುದಿಲ್ಲ ಎಂದು ಸಂಶೋಧಕರು ಹೊಂದಿರುವ ನಂಬಿಕೆಗೆ ಕಾರಣವಾಗಿದೆ; ಅಂದರೆ ವ್ಯಕ್ತಿ ಮತ್ತು ಗುಂಪಿನ ಪರಿಕಲ್ಪನೆಯು ತರ್ಕಕ್ಕೆ ನಿಲುಕದ್ದು ಎಂದು ಸಂಶೋಧಕರು ಹೇಳುತ್ತಾರೆ. "ಆದಿಮ ಸಮಾಜಗಳಲ್ಲಿ  ವ್ಯಕ್ತಿಯು ಒಬ್ಬ ಪ್ರತ್ಯೇಕ ವ್ಯಕ್ತಿಯಾಗಿ ಯಾವುದೇ ಸ್ಥಾನವನ್ನು ಹೊಂದಿರುವುದಿಲ್ಲ. ಅವರಿಗೆ, ವ್ಯಕ್ತಿಯು ತನ್ನ ಗುಂಪಿನ ಭಾಗವಿದ್ದಾಗ ಮಾತ್ರ ಅವನಿಗೆ ವಾಸ್ತವವಾಗಿ ಒಂದು ಅಸ್ತಿತ್ವವಿರುತ್ತದೆ," ಎಂದು ಲೆವಿ–ಬ್ರುಲ್ (Levy-Bruhl) ಆದಿಮ ಸಮಾಜಗಳ ಬಗ್ಗೆ  ಹೇಳುತ್ತಾರೆ.[1][...]

ಪೌರಾಣಿಕ–ಮಾಯೆ ಆಧಾರಿತವಾಗಿರದ ಆದಿಮರ ಚಿಂತನೆಯ ಅತ್ಯಗತ್ಯ ಗುಣಲಕ್ಷಣಗಳೆಂದರೆ ಅದು ಅಮೂರ್ತಗಳ ಬಗ್ಗೆ ಅವರಿಗಿರುವ ಜಾಗರೂಕ ಗುಮಾನಿ ಮತ್ತು ಅದರಿಂದ ದೂರ ಇರುವುದಾಗಿರುತ್ತದೆ. ಅವರ ಅನೇಕ ತಾತ್ವಿಕ ಎನ್ನಬಹುದಾದ ಹೇಳಿಕೆಗಳು ನಿಜಕ್ಕೂ ಅಮೂರ್ತತೆಯ ಬಗೆಗಿನ ಅವರ ಎಚ್ಚರಿಕೆಯ ಬುದ್ಧಿವಾದಗಳಾಗಿದೆ. ಉದಾಹರಣೆಗೆ ಪಶ್ಚಿಮ ದೇಶ ನಿವಾಸಿಗಳಾದ ನಮ್ಮಿಂದ ಪ್ರೀತಿಸುವುದನ್ನು ಮತ್ತು ಪ್ರೀತಿಯು ಒಳ್ಳೆಯದು ಎಂದು ನಂಬುವುದನ್ನು ನಿರೀಕ್ಷಿಸಲಾಗುತ್ತದೆ. ಆದಿಮ ಜನಾಂಗದವರು ಪ್ರೀತಿಯೆಂಬ ಕಲ್ಪನೆಗೆ ಪ್ರೀತಿ ತೋರಬೇಡಿ, ಬದಲಿಗೆ ಇಂತಿಂತಹವರನ್ನು ಪ್ರೀತಿಸಬೇಕು ಮತ್ತು ಪ್ರೀತಿಯನ್ನು ಮೌಕಿಕವಾಗಿ ಹೇಳುವುದಲ್ಲ, ನಡೆಯಲ್ಲಿ ತೋರಬೇಕು ಎಂದು ತಿಳಿಸಿಕೊಡುತ್ತಾರೆ.

ಅಮೂರ್ತದೆಡೆಗಿನ ಆದಿಮ ಸಮಾಜಗಳ ಹೇವರಿಕೆಯು ವಿಶೇಷವಾಗಿ ಸಮಾಜದ ಬಗ್ಗೆ ಅವರ ಚಿಂತನೆಗೆ ಸಂಬಂಧಿಸಿದ್ದಾಗಿರಬಹುದು. ಏಕೆಂದರೆ ಆದಿಮ ಸಾಮಾಜಿಕ ವ್ಯವಸ್ಥೆಗೆ ಅಂತಹ ಸಾಮಾಜಿಕ ಅಮೂರ್ತತೆಗಳ ಅವಶ್ಯಕತೆಯಿರುವುದಿಲ್ಲ. ಸಾಮಾಜಿಕ ಬೇಧಭಾವಗಳನ್ನು ಹುಟ್ಟುಹಾಕುವ ಮತ್ತು ಅವುಗಳನ್ನು ಕೇವಲ ಅಮೂರ್ತ ಸಾಮಾಜಿಕ ತತ್ವ ಅಥವಾ ಕ್ರಾಂತಿಯು ಹೊಂದಾಣಿಕೆ ಮಾಡಲು ಸಹಾಯ ಮಾಡುವ ಆರ್ಥಿಕ ಅಸಮಾನತೆ ಮತ್ತು ವರ್ಗ ಸಂಘರ್ಷಗಳಂತಹ ಪ್ರಭಾವಿ ಅಂಶಗಳನ್ನು ಆದಿಮ ಸಮಾಜಗಳು ಹೊಂದಿರುವುದಿಲ್ಲ. ಜನರ ಹೊರತಾಗಿ ಮತ್ತು ಅವರ ಮೇಲುಸ್ತರದಲ್ಲಿ ಯಾವುದೇ ರೀತಿಯ

ಕಾನೂನು, ರಾಜಕೀಯ, ಆಡಳಿತ ಸಂಸ್ಥೆಗಳಾಗಲಿ ಇಲ್ಲವೇ ಪ್ರಭುತ್ವದ ರಚನೆ ಅಥವಾ ಸಂಸ್ಥೆಗಳಾಗಲೀ ಅಲ್ಲಿ ಇಲ್ಲ. ಆದಿಮ ಸಮಾಜಗಳು ಪಾಲ್ಗೊಳ್ಳುವಿಕೆಯನ್ನು ಬಯಸುತ್ತದೆ. ಸಮಾಜದಲ್ಲಿನ ಸಂಘರ್ಷಗಳು ಸಂಸ್ಥೆಗಳು ಅಥವಾ ಕಾರ್ಪೊರೇಟ್ ಸಂಸ್ಥೆಗಳ ವಿರುದ್ಧವಾಗಿರದೆ ನಿರ್ದಿಷ್ಟ ವ್ಯಕ್ತಿಗಳನ್ನು ಉದ್ದೇಶಿತದ್ದಾಗಿರುತ್ತವೆ. ಪರ್ಯಾಯ ಸಾಮಾಜಿಕ ವ್ಯವಸ್ಥೆಯ ಪರಿಕಲ್ಪನೆಗಳನ್ನು ನೀಡುವ ರಾಜಕೀಯ ಸಿದ್ಧಾಂತಗಳಾಗಿ ಅವರ ಚರ್ಚೆಗಳು ಅಮೂರ್ತಗೊಳ್ಳುವುದಿಲ್ಲ. ಯಾವುದೇ ವ್ಯಕ್ತಿಗೆ ಸಾಮಾಜಿಕ ಕಟ್ಟುಪಾಡುಗಳು ಅಸಾಧ್ಯವೆನಿಸುವ ಅಡೆತಡೆಯಾದಾಗ ಕಟ್ಟುಪಾಡುಗಳನ್ನು ಮುರಿಯಬಹುದು ಅಥವಾ ಗುಂಪಿನಿಂದ ಹೊರಹೋಗಿ ಹೊಸ ಗುಂಪನ್ನೇ ಹುಟ್ಟುಹಾಕಬಹುದು. ಆ ಗುಂಪಿನ ಹೆಚ್ಚಿನೆಲ್ಲ ನಿಯಮಗಳು ಆತ ಯಾವ ಸಮಾಜವನ್ನು ಬಿಟ್ಟು ಬಂದನೋ ಅಂತಹುದೇ ಆಗಿರುತ್ತದೆ. ಯಾವುದೋ ಒಂದು ನಿರ್ದಿಷ್ಟ ಗುರಿಯನ್ನು ಮುಟ್ಟಲು ಆ ನಿಯಮವು ಅಡೆತಡೆಯಾಗಿ ಕಂಡುಬರುವುದಿಲ್ಲ ಮತ್ತು ಅದು ಮತ್ತೆ ಎಂದಿಗೂ ಮತ್ತೊಮ್ಮೆ ಅಡೆತಡೆಯಾಗುವುದಿಲ್ಲ. ಸಂಘರ್ಷಗಳು ಅಮೂರ್ತವಾಗದೇ ವೈಯಕ್ತಿಕವಾದದ್ದರಿಂದ ಸಮಾಜಗಳಲ್ಲಿ ರಾಜಕೀಯ ಮತ್ತು ಸಾಮಾಜಿಕ ದೂರ ಮಾಡುವಿಕೆ ಇರುವುದಿಲ್ಲ. ಎದುರಾಳಿಯು ಜನರೇ ಹೊರತು ಸಂಸ್ಥೆಯೋ ಅಥವಾ ಗುಂಪು ಅಸ್ಮಿತೆಗಳೋ ಆಗಿರುವುದಿಲ್ಲ. ವಿರೋಧವು 'ನಾವು ಪ್ರಜೆಗಳು' ಮತ್ತು 'ಅವರು ಸಮಾಜ' ಎಂಬುದರ ನಡುವೆ ಅಲ್ಲ. ಹಾಗಾಗಿ ಆದಿಮ ಸಮಾಜದಲ್ಲಿ ಕ್ರಾಂತಿ ಎಂಬುದು ಇಲ್ಲವೇ ಇಲ್ಲ. ಡೈಮಂಡ್ ಹೇಳುವಂತೆ:

> ಆದಿಮ ವ್ಯಕ್ತಿಯು ನಿರ್ದಿಷ್ಟ ಚಟುವಟಿಕೆಗಳನ್ನೊಳಗೊಂಡ ಒಂದು ಕೃತಿಮವಾಗಿ ಸಂಯೋಜಿತ ಮತ್ತು ಸಮಗ್ರವಾದ ಪ್ರಪಂಚದ ಕೇಂದ್ರದಲ್ಲಿದ್ದು, ಅವುಗಳ ನಡುವಿನ ಕಾರ್ಯಕಾರಣ ಸಂಬಂಧಗಳ ಬಗ್ಗೆ ನಿರ್ಲಕ್ಷ ಉಳ್ಳವನಾಗಿದ್ದಾನೆ. ಏಕೆಂದರೆ ಕೇವಲ ನಿರಂತರವಾದ ಬಿಕ್ಕಟ್ಟಿನ ಸ್ಥಿತಿಯಷ್ಟೇ ಸಮಾಜದ ಈ ಕಾರ್ಯಕಾರಣಗಳ ಸಂಬಂಧಗಳ ವಿಶ್ಲೇಷಣೆಯಲ್ಲಿ ಆಸಕ್ತಿಯನ್ನು ಪ್ರಚೋದಿಸುತ್ತದೆ. ಸಮಾಜದ ವಿವಿಧ ಘಟಕಗಳ ನಡುವೆ ಅಸಹನೀಯ ಅಸಂಗತತೆ ಒಂದನ್ನು ಮತ್ತೊಂದರಿಂದ ಸೂಕ್ಷ್ಮವಾಗಿ ಬೇರ್ಪಡಿಸಿ ಅವುಗಳ ಪರಸ್ಪರ ಪರಿಣಾಮಗಳನ್ನು ಶೋಧಿಸುವಂತೆ ನಮ್ಮ ಮೇಲೆ ಒತ್ತಡ ಹಾಕುತ್ತವೆ.[2]

ಆದಿಮ ಸಮಾಜಗಳಿಗೆ ಸಮಾಜದ ಬಗೆಗಿನ ಅಮೂರ್ತತೆಗಳ ಅಗತ್ಯತೆ ಇಲ್ಲದಿರುವುದು ಅದರ ಸಂಭವಿಸುವಿಕೆಗೆ ಲಭ್ಯವಿರುವ ಅತಿ ವಿರಳ ಮತ್ತು ಸಮಸ್ಯಾತ್ಮಕ ಪುರಾವೆಗಳು ಎತ್ತಿತೋರಿಸುತ್ತದೆ. ಇದು ಆದಿಮ ಸಮಾಜಗಳು ವ್ಯಕ್ತಿ ಮತ್ತು ಸಮಾಜವನ್ನು ಬೇರೆಬೇರೆ ಘಟಕಗಳೆಂದು ಭಾವಿಸುವುದಿಲ್ಲ ಎಂಬ ದೃಷ್ಟಿಕೋನಕ್ಕೆ ಹೆಚ್ಚಿನ ವಿಶ್ವಾಸಾರ್ಹತೆಯನ್ನು ನೀಡುತ್ತದೆ. ಏಕೆಂದರೆ ಆದಿಮ ಸಮಾಜಗಳಲ್ಲಿ ಅಂತಹ ಅಮೂರ್ತತೆಗಳಿಗೆ ಅಗತ್ಯತೆ ಇಲ್ಲ.

ಸಮಾಜ ಮತ್ತು ವ್ಯಕ್ತಿ ನಡುವಿನ ಜೈವಿಕ ಸಂಬಂಧವು ಸಮಾಜ ಮತ್ತು ಸಾಮಾಜಿಕ ಪರಿಸರದ ನಡುವಿನ ಸಂಬಂಧದಲ್ಲಿ ಪ್ರತಿರೂಪಿತವಾಗುತ್ತದೆ. ವ್ಯಕ್ತಿಯು ಸಮಾಜದಿಂದ ದೂರವಿರದೆ ಇರುವ ಕಾರಣದಿಂದ ಸಮಾಜದ ಅಸ್ತಿತ್ವವು ಅದು ನೆಲೆಸಿರುವ ಸ್ಥಳದಿಂದ ಪ್ರತ್ಯೇಕವೆಂದೂ ಮತ್ತು ವ್ಯಕ್ತಿಗಳು ಭೂಮಿಯಿಂದ ದೂರವೆಂದೂ ಪರಿಭಾವಿಸುವುದಿಲ್ಲ. ಸ್ಥಳದ ಬಗ್ಗೆ ಸುಪರಿಚಿತ ಮತ್ತು ನಿರಂತರ ಜ್ಞಾನವು ಆ ನೆಲದ ಬಗೆಗಿನ ಪೌರಾಣಿಕ ದೃಷ್ಟಿಯೊಳಗೆ ಮಿಳಿತವಾಗಿರುತ್ತದೆ, ಇದು ಸಮಾಜವನ್ನು ಸ್ಥಳದೊಂದಿಗೆ ಒಂದಾಗಿಸುತ್ತದೆ. ಸ್ಥಳವು

ಪೂರ್ವಜರ ಚಿನ್ಮಾತ್ರ ಸ್ವರೂಪಗಳಿಂದ (spirits) ಆವೃತವಾಗಿರುತ್ತದೆ ಮತ್ತು ಒಂದು ನಿರ್ದಿಷ್ಟ ಪ್ರದೇಶವು ಒಂದು ಜನಾಂಗಕ್ಕೆ ಅವರ ಸೃಷ್ಟಿಕರ್ತರಿಂದ ಕೊಡಲ್ಪಟ್ಟಿರುತ್ತದೆ. ಆಸ್ಟ್ರೇಲಿಯಾದ ಪ್ರತಿಯೊಂದು ಕುಲದೇವತೆಯ ಲಾಂಛನಕ್ಕೆ (totem) ಸೇರಿದ ಗುಂಪು ಅವರ ಕುಲದೇವತೆಯ ಪೂರ್ವಜರು ಹುಟ್ಟಿದ ನೆಲ ಎಂದು ಗುರುತಿಸಲ್ಪಟ್ಟ ಸ್ಥಳಕ್ಕೆ ಸಂಬಂಧ ಹೊಂದಿರುತ್ತದೆ. ವ್ಯಕ್ತಿಯು ಮೃತನಾದಾಗ ಆತನ ಚಿನ್ಮಯವು ಆ ಗುಂಪಿನ ಕುಲದೇವತೆಯ ಮೂಲ ಜಾಗಕ್ಕೆ ಹೋಗುತ್ತದೆ. [....]

ಅನೇಕ ವೇಳೆ ನಿಬ್ಬೆರಗುಗೊಳಿಸುವ ಭೂಪ್ರದೇಶದ ಬಾಹ್ಯ ಲಕ್ಷಣಗಳ ನೆಲಸೊಬಗಿನ ಆಕೃತಿರೂಪಗಳನ್ನು ಪೌರಾಣಿಕ ಕಥೆಗಳಲ್ಲಿ ಒಳಸೇರಿಸುವುದರಿಂದ ಅವು ಒಂದು ಸ್ಥಳವನ್ನು ಸಮಾಜಕ್ಕೆ ಆಧಾರಮೂಲವಾಗಿಸಲು ಸಾಧ್ಯವಾಗಿಸುತ್ತದೆ. ಪೆನಾಬ್ಸ್ಕಾಟ್ (Penobscot) ಇಂಡಿಯನ್ನರ ನಂಬಿಕೆಗಳ ಪ್ರಕಾರ ಹೆಚ್ಚಿನೆಲ್ಲ ಭೂಪ್ರದೇಶಗಳು ಪೌರಾಣಿಕ ಮನುಷ್ಯನಾದ ಗ್ಲುಸ್ಕಾಬೆ (Gluskabe) ಪರ್ಯಟನೆಯಿಂದ ಉಂಟಾದದ್ದು; ಅವನು ಒಂದು ದೈತ್ಯ ಕಪ್ಪೆಯನ್ನು ಕೊಂದಾಗ ಪೆನಾಬ್ಸ್ಕಾಟ್ ನದಿಯು ಹುಟ್ಟಿತು ಎಂಬುದು ಅವರ ನಂಬಿಕೆ. ಗ್ಲುಸ್ಕಾಬೆನ ಹಿಮ ಶೂಗಳ ಗುರುತುಗಳು ಇಂದಿಗೂ ಮೇನ್ (Maine) ನ ಮಿಲಾ (Mila) ಮುಂತಾದೆಡೆಗಳಲ್ಲಿ ಬಂಡೆಕಲ್ಲುಗಳ ಮೇಲೆ ಇದೆ. ಕ್ಯಾಸ್ಟೀನ್ (Castine) ಸಮೀಪದ 25 ಅಡಿ ಉದ್ದದ ಬಂಡೆಯು ಆತನ ತಿರುಗುಮುರುಗಾದ ದೋಣಿ, ದೋಣಿಯ ಪಕ್ಕ ಸಾಲಾಗಿ ನಿಂತಿರುವ ಬಂಡೆಗಳು ಅವನ ಪಾದದ ಗುರುತುಗಳು ಮತ್ತು ಕಿನಿಯೋ (Kineo) ಪರ್ವತವು ಆತನ ಅಡುಗೆಪಾತ್ರೆ ಬೋರಲು ಬಿದ್ದಿರುವುದು – ಹೀಗೆ. ನಿರ್ದಿಷ್ಟವಾಗಿ ದೇವತೆಗಳಿಂದಲೇ ಭೂಮಿಯ ಮೇಲಿನ ಸ್ಥಳವು ಜನರಿಗೆ ಕೊಡಲ್ಪಟ್ಟಿದೆ ಎಂಬುದು ಬಹಳಷ್ಟು ಸೃಷ್ಟಿ ಪುರಾಣಗಳಲ್ಲಿ ಹೇಳಲಾಗಿದೆ. ಉದಾಹರಣೆಗೆ ಭೂಮಿಯ ಒಳಗಿನಿಂದ ತಮ್ಮ ಈಗಿನ ಸ್ಥಳಕ್ಕೆ ತಾಯಿ ಕಾರ್ನ್ (Mother Corn) ಮಾರ್ಗದರ್ಶನ ನೀಡಿದರೆಂದು ಪಾನಿ (Pawnee) ಪಂಗಡದವರು ನಂಬುತ್ತಾರೆ. ಕೆರಿಸನ್ ಪಬ್ಲೋ ಇಂಡಿಯನ್(Keresan Pueblo Indians)ಪಂಗಡದವರು ಅವರ ತಾಯಿ ಇಯಾಟಿಕು (Iyatiku) ಅವರನ್ನು ಭೂತಾಯಿಯ ಗರ್ಭದಿಂದ ಭೂಮಿಯ ಮೇಲಿನ ಶಿಪಾಪ್ (Shipap) ಎಂಬ ಈಗ ಅವರಿರುವ ಸ್ಥಳಕ್ಕೆ ಕರೆತಂದಳು ಎಂದು ನಂಬುತ್ತಾರೆ.

ತಮ್ಮ ಪೂರ್ವಜರ ಚಿನ್ಮಾತ್ರ ಸ್ವರೂಪಗಳು ಭೂಮಿಯಲ್ಲಿ ನೆಲೆಸಿದೆ ಮತ್ತು ಭೂಮಿಯು ಜನರಿಗೆ ಒಂದು ಪೌರಾಣಿಕ ಅನುಗ್ರಹ ಎಂಬ ನಂಬಿಕೆಯೂ ಭೂ ಒಡೆತನ ಮತ್ತು ಅದರ ಬಳಕೆಯ ಬಗ್ಗೆ ಒಂದು ಪ್ರಬಲವಾದ ಸಾಮುದಾಯಿಕ ಪ್ರಜ್ಞೆಯನ್ನು ಬೆಳೆಸಿದೆ. ಭೂಮಿಗೆ ಪ್ರವೇಶಾವಕಾಶ ಬೇಕೆಂದರೆ ಪ್ರತಿಯೊಬ್ಬರೂ ಆ ಸಮಾಜದ ಸದಸ್ಯರಾಗಿರಬೇಕು, ಅಂದರೆ ಆ ಗುಂಪಿನ ಆಧ್ಯಾತ್ಮಿಕ ಚರಿತ್ರೆಯನ್ನು ತಳೆದಿರಬೇಕು. ಉದಾಹರಣೆಗೆ, ಬಕಾಂಗೊ (Bakongo) ಸಂಪ್ರದಾಯದಲ್ಲಿ,

> ಭೂ ಮೇಲಿನ ಒಡೆತನ ಸಾಮೂಹಿಕದು, ಆದರೆ ಈ ಪರಿಕಲ್ಪನೆ ಬಹಳ ಸಂಕೀರ್ಣವಾದದ್ದು. ಒಂದು ಕುಲ ಅಥವಾ ವಂಶ ಭೂಮಿಯ ಒಡೆತನ ಹೊಂದಿರುತ್ತದೆ. ಆದರೆ ಕುಲ ಮತ್ತು ವಂಶ ಕೇವಲ ಬದುಕಿರುವವರನ್ನಷ್ಟೇ ಒಳಗೊಂಡಿರುವುದಿಲ್ಲ, ಮೃತರಾದವರೂ ಕೂಡ

ಇದರ ಪ್ರಮುಖ ಸದಸ್ಯರು; ಇವರೇ *'ಬಕುಲು (Bakulu).'* ಕುಲದಲ್ಲಿ ಮೃತರಾದವರೆಲ್ಲರೂ *'ಬಕುಲು'* ಅಲ್ಲ; ಭೂಮಿಯ ಅಡಿಯಲ್ಲಿ ಅವರವರ ಹಳ್ಳಿಗಳಲ್ಲಿ ಸಂತೃಪ್ತ ಜೀವನವನ್ನು ನಡೆಸುತ್ತಿರುವ ಅವರು ಕೇವಲ ಅದರ ನ್ಯಾಯನಿಷ್ಠ ಪೂರ್ವಜರು. ಕುಲದ ಕಟ್ಟು ಕಟ್ಟಳೆಗಳನ್ನು ಯಾರು ಗೌರವಿಸುವುದಿಲ್ಲವೋ ಅಂಥ  ಸದಸ್ಯರು ಸಮಾಜದಿಂದ ಬಹಿಷ್ಕೃತರಾಗುತ್ತಾರೆ. ನದಿ ಮತ್ತು ಕಾಡು, ಕೊಳಗಳು ಮತ್ತು ಕಾರಂಜಿಗಳು ಈ ಎಲ್ಲವೂ ಒಳಗೊಂಡ ಕುಲದ ಪ್ರದೇಶವನ್ನು *'ಬಕುಲು'*ಗಳು ಪಡೆದಂತವು; ಅವರೇ ಈ ಭೂಮಿಯಲ್ಲಿ ಹೂಳಲ್ಪಟ್ಟಿರುವುದು. ಈ ಪ್ರದೇಶವನ್ನು ಈಗಲೂ ಆಳುತ್ತಿರುವುದು ಅವರೇ. ಅವರು ಅವರ ಕಾರಂಜಿ, ನದಿ, ಕೊಳಗಳಿಗೆ ಕಾಲಕಾಲಕ್ಕೆ ಹಿಂತಿರುಗುತ್ತಾರೆ. ಕಾಡು ಮೇಡುಗಳ ಮತ್ತು ಪೊದೆಗಳಲ್ಲಿನ ಕಾಡು ಮೃಗಗಳು ಅವರ ಮಾಂಸದ ಮೇಕೆಗಳು, ಅಲ್ಲಿನ ಪಕ್ಷಿಗಳು ಅವರ ಬೆಳೆಹಕ್ಕಿಗಳು. ತಿನ್ನಬಹುದಾದ ಮರದ ಮೇಲಿನ ಕಂಬಳಿಹುಳಗಳು, ನದಿಯ ಮೀನುಗಳು, ತಾಳೆ ಮರದ ವೈನ್, ಬೆಳೆವ ಬೆಳೆಗಳು ಈ ಎಲ್ಲವನ್ನೂ 'ಕೊಡಮಾಡುವುದು' ಈ *ಬಕುಲುರೇ.* ಆ ನೆಲದಲ್ಲಿ ಬದುಕುತ್ತಿರುವ ಕುಲಜನರು ಬೆಳೆ ಬೆಳೆಯಬಹುದು, ಫಲ ಪಡೆಯಬಹುದು, ಬೇಟೆಯಾಡಬಹುದು, ಮೀನು ಹಿಡಿಯಬಹುದು; ಅವರು ಪೂರ್ವಜರ ಪ್ರದೇಶವನ್ನು ಬಳಸಬಹುದಾದರೂ, ಆ ಪ್ರದೇಶದ ಕಾಪಿನವರು ಮೃತ ಪೂರ್ವಜರೆ. ಕುಲ ಮತ್ತು ಅವರು ನೆಲಸುವ ಭೂಮಿ ಎರಡೂ ಒಂದಕ್ಕೊಂದು ಅವಿಭಾಜ್ಯ ಅಂಗವಾಗಿದ್ದು, ಈ ಎಲ್ಲವೂ *'ಬಕುಲು'* ಗಳಿಂದ ಆಳಲ್ಪಡುತ್ತವೆ.  ಪ್ರದೇಶವನ್ನು ಇಡಿಯಾಗಿ ಅಥವಾ ಭಾಗವಾಗಿಯಾಗಲೀ ಪರಭಾರೆ ಮಾಡುವುದು ಬಕಾಂಗೋ ಮನಸ್ಥಿತಿಗೆ ವಿರುದ್ಧವಾದ ಕಲ್ಪನೆಯಾಗಿದೆ.[3]

ಆದಿಮ ಜನಾಂಗದವರಿಗೆ ಸಮಾಜ ಮತ್ತು ಸ್ಥಳವೆರಡೂ ಎಷ್ಟರ ಮಟ್ಟಿಗೆ ಪರಸ್ಪರಸಂಬಂಧ ಹೊಂದಿದ್ದವೆಂದರೆ ತಮ್ಮ ಸಮಾಜ ಇನ್ನೆಲೋ ಇದೆ ಅಥವಾ ಸ್ಥಳಕ್ಕೆ ಸಂಬಂಧಿಸಿದಂತೆ ಒಂದು ಭಿನ್ನ ಸಂರಚನೆ ಹೊಂದಿದೆ ಎನ್ನುವುದರ ಬಗ್ಗೆ ಊಹಾಪೋಹಗಳಲ್ಲಿ ಕಳೆದುಹೋಗುವುದು ಗಿಡವನ್ನು ಬೇರಿನಿಂದ ಕಡಿದಂತೆ. ಅದು ಅವರಿಗೆ ಯಾವುದೇ ಮಹತ್ವವನ್ನು ಹೊಂದಿರುವುದಿಲ್ಲ. ಆದರೆ ಅಂತಹ ಬೌದ್ಧಿಕ ಕಲ್ಪನೆಗಳೇ ಸಾಮಾಜಿಕ ಯೋಜನೆ ಮತ್ತು ಸಿದ್ಧಾಂತವು ಬೇಡುತ್ತದೆ. 'ಭೂಮಿಯ ಒಡೆತನವು ಬದಲು ಮಾಡುವಂತಹ ರೀತಿಯಲ್ಲಿ ಸಾಮಾಜಿಕ ಸಂರಚನೆಯನ್ನು ಬದಲಿಸಿದರೆ ಹೇಗೆ; 'ಕೆಲವು ಗುರಿಗಳನ್ನು ಸುಲಭವಾಗಿ ಮುಟ್ಟಲು ಹಳ್ಳಿಗಳ ವಿನ್ಯಾಸವೇ ಬದಲಿಸಿ, ಅಲ್ಲಿರುವುದನ್ನು ಇಲ್ಲಿಗೆ ಬದಲಾಯಿಸಿದರೆ, ವೃತ್ತ ಇರುವುದನ್ನು ಆಯತವನ್ನಾಗಿಸಿದರೆ ಹೇಗೆ' ಎನ್ನುವ ಹೇಳಿಕೆಗಳು, ಸಮಾಜ ಮತ್ತು ಸ್ಥಳದ ಪರಿಕಲ್ಪನಾತ್ಮಕ ದೃಷ್ಟಿಯ ಅಗತ್ಯ ಭೂಮಿಕೆಗಳು. ಅವು ಪ್ರದೇಶದಿಂದ ಸಾಮಾಜಿಕ ಚಟುವಟಿಕೆಗಳನ್ನು ಅಥವಾ ಸಿರಿಯನ್ನು ಪರಿಕಲ್ಪನಾತ್ಮಕವಾಗಿ ಬೇರ್ಪಡಿಸಿ ಮತ್ತೆ ಪುನಃಜೊತೆಗೂಡಿಸುವುದನ್ನು ಒಳಗೊಂಡಿರುತ್ತದೆ – ಈ ಬೇರ್ಪಡಿಸುವಿಕೆಯು ಎಲ್ಲ ರೀತಿಯ ಸಾಮಾಜಿಕ ಸಿದ್ಧಾಂತದ ಆಧಾರವಾಗಿರುತ್ತದೆ. ಆದಿಮ ಅವರ ಲೋಕದೃಷ್ಟಿಯಲ್ಲಿ ಪ್ರದೇಶ ಮತ್ತು ಸಮಾಜದ ಬೇರ್ಪಡಿಸುವಿಕೆ ಮತ್ತು ಮರುಸಂಯೋಜನೆಯ ಪ್ರಯತ್ನವು ಅನುಪಸ್ಥಿತವಾಗಿರುತ್ತದೆ. ಪ್ರದೇಶ ಮತ್ತು ಜನಾಂಗ ಪರಿಕಲ್ಪನಾತ್ಮಕವಾಗಿ ಬೆಸಿದುಕೊಂಡಿರುತ್ತದೆ. ಸಮಾಜವು

ಅದು ನೆಲೆಸಿರುವ ಸ್ಥಳದದಿಂದ ಅರ್ಥಪಡೆದುಕೊಳ್ಳುತ್ತದೆ, ಸಾಮಾಜಿಕ ಸಂಬಂಧಗಳಿಂದ ಸ್ಥಳವು ಅರ್ಥಪಡೆದುಕೊಳ್ಳುತ್ತದೆ ಮತ್ತು ಸಮಾಜದಲ್ಲಿನ ವ್ಯಕ್ತಿಗಳು ಭೂಮಿಯಿಂದ ದೂರವಾಗುವುದಿಲ್ಲ.

**ನಾಗರೀಕತೆ**

[...] ಆದಿಮ ಜೀವನ ಶೈಲಿಯಿಂದ ನಾಗರೀಕತೆಯೆಡೆಗೆ ನಡೆದ ಪರಿವರ್ತನೆಗಳಿಗೆ ಕಾರಣಗಳು ಸ್ಪಷ್ಟವಿಲ್ಲವಾದರೂ ಈ ಎಲ್ಲ ಬದಲಾವಣೆಗಳಲ್ಲೂ ಒಂದು ವರ್ಗರಹಿತ ಸಮಾಜವೂ ವರ್ಗ ಆಧಾರಿತ ಸಮಾಜವಾಗಿ ಬದಲಾವಣೆ ಹೊಂದಿತು ಎನ್ನುವುದು ಸ್ಪಷ್ಟವಾಗಿ ಸ್ಥಾಪಿಸಲಾಗಿದೆ. ನಾಗರೀಕತೆಗಳು ಆರ್ಥಿಕ ವರ್ಗಗಳನ್ನು ಹೊಂದಿವೆ. ಆರ್ಥಿಕ ವರ್ಗ ಎನ್ನುವ ಅಂಶವು ಅತೀ ಮಹತ್ವದವು ಏಕೆಂದರೆ ಇವು ಸಾಮಾಜಿಕ ವ್ಯವಸ್ಥೆಯ ಬಗ್ಗೆ ಭಿನ್ನವಾದ ಹಾಗೂ ಅನೇಕ ವೇಳೆ ವಿರೋಧಾಭಾಸದ ಮತ್ತು ವೈರುಧ್ಯವಾದ ದೃಷ್ಟಿಕೋನಗಳಿಗೆ ಎಡೆಮಾಡಿಕೊಡುತ್ತದೆ.

ಸಮಾಜದ ಎಲ್ಲರೂ ಸಮಾಜವನ್ನು ಒಂದೇ ರೀತಿಯಾಗಿ ನೋಡುವುದು ಅಂದಿನಿಂದಲೇ ಬದಲಾಯಿತು. ಬದಲಾಗಿ ಅದು ಬಹುಮುಖೀ ಮತ್ತು ಗೊಂದಲವುಳ್ಳ ಪರಿಕಲ್ಪನೆಯಾಯಿತು. ನಾಗರೀಕತೆಗಳು ಒಂದಾಗಿ ಬಾಳುವಂತಾಗಲು ಇಂತಹ ವಿವಿಧ ದೃಷ್ಟಿಕೋನಗಳ ನಡುವೆ ಸಮನ್ವಯ ಸಾಧಿಸಲೇಬೇಕಾಗಿತ್ತು. ಈ ಸಮಸ್ಯೆಗಳನ್ನು ಸಮನ್ವಯಗೊಳಿಸುವ ನಾಗರೀಕತೆಯ ರಚನೆಯೊಂದಿಗೆ ಸಮಕಾಲೀನವಾಗಿ ಒದಗಿ ಬಂದ ಕಾರ್ಯವಿಧಾನ ಯಾವುದೆಂದರೆ ಅದು ಪ್ರಭುತ್ವದ ರಚನೆಯಾಗಿತ್ತು – ಅದು ಪ್ರಾಚೀನಕಾಲ ಅಥವಾ ಊಳಿಗಮಾನ್ಯ ಅಥವಾ ಪೌರಸ್ತ್ಯ ಅಥವಾ ಆಧುನಿಕ ಮಾದರಿಯ ಪ್ರಭುತ್ವ ರಚನೆಯದ್ದೇ ಆಗಿರಬಹುದಾಗಿತ್ತು.

**Commented [AKAP9]:** Try to smoothen the sentence trasitions. Until the previous paragraphs the transitions were smooth.

ಸಮಾಜವನ್ನು ಇಡಿಯಾಗಿ ಆವರಿಸಿಕೊಂಡ ಹಾಗೂ ಜನರ ಮೇಲಿನ ಸ್ತರದಲ್ಲಿರುವ ಒಂದು ಸಂಸ್ಥೆಯೇ ಪ್ರಭುತ್ವ. ಅದರ ಅಂಗಗಳು ಪ್ರಜೆಗಳಿಗೆ ಸಮಾನವೆಂದೇನೂ ಕಾಣುವುದಿಲ್ಲ. ಆದಿಮ ಸಮಾಜಗಳಂತಲ್ಲದೇ, ಪ್ರಭುತ್ವ ಮತ್ತು ಅದರ ಅಧಿಕಾರಿಗಳು ಮತ್ತು ಅವರ ಅಧಿಕಾರಗಳು ಪ್ರಜೆಗಳು ಮತ್ತು ಅವರ ಅಧಿಕಾರಗಳಿಂದ ಪ್ರತ್ಯೇಕವಾಗಿರುತ್ತವೆ. ಪ್ರಭುತ್ವವು ತನ್ನ ಪ್ರಜೆಗಳ ಮೇಲೆ ಬಲಪ್ರಯೋಗ ಮಾಡುವ ಅಧಿಕಾರವನ್ನು ಹೊಂದಿರುತ್ತದೆ. ಎಂಗೆಲ್ಸ್ (Engels) ವಿವರಿಸುವಂತೆ, ಪ್ರಭುತ್ವವು

> ಸಮಾಜದ ಬೆಳವಣಿಗೆಯ ಒಂದು ನಿರ್ದಿಷ್ಟ ಹಂತದ ಫಲ; ಈ ಸಮಾಜವು ಬಗೆಹರಿಸಲಾಗದ ವಿರೋಧಾಭಾಸಗಳಿಂದಲೂ ಹಾಗೂ ಸಮನ್ವಯ ಸಾಧಿಸಲಾಗದ ವೈಷಮ್ಯಗಳಿಂದಲೂ ಬಿರುಕು ಬಿಟ್ಟಿದ್ದು, ಅವುಗಳನ್ನು ಉಚ್ಚಾಟನೆ ಮಾಡಲು ಅದು ನಿಶ್ಶಕ್ತವಾಗಿದೆ ಎನ್ನುವುದರ ಅಭಿವ್ಯಕ್ತಿ. ಈ ವೈಷಮ್ಯಗಳು, ಸಂಘರ್ಷಣಾತ್ಮಕವಾದ ಹಿತಾಸಕ್ತಿಗಳುಳ್ಳ ಸಮಾಜದ ವರ್ಗಗಳು ತಮ್ಮನ್ನು ಮತ್ತು ಸಮಾಜವನ್ನು ನಿಷ್ಫಲ ಹೋರಾಟಗಳಲ್ಲಿ ಮುಳುಗಿಸಿಬಿಡದಂತೆ, ಒಂದು ಅಧಿಕಾರ, ಸಮಾಜಕ್ಕೂ ಮೇಲಿನ ಸ್ತರದಲ್ಲಿರುವಂತಹದು, ಅಗತ್ಯವಾಯಿತು. ಇದು ಘರ್ಷಣೆಗಳನ್ನು 'ತಹಬಂದಿಗೆ' ತಂದು ಒಂದು ವ್ಯವಸ್ಥೆಯಲ್ಲಿ ಎಲ್ಲವನ್ನೂ ಸರಿದೂಗಿಸುವಂತಹ ಒಂದು ಅಧಿಕಾರ; ಸಮಾಜದಿಂದಲೇ ಹೊರಹೊಮ್ಮಿದ ಆದರೆ ತನ್ನನ್ನು ಅದಕ್ಕಿಂತ ಮೇಲು ಸ್ತರದಲ್ಲಿ

ಇರಿಸಿಕೊಂಡಿದ್ದು, ಅದರಿಂದ ಹೆಚ್ಚು ಹೆಚ್ಚು ಯಾವುದು ದೂರವಾಗುತ್ತಿದೆಯೋ ಆ ಅಧಿಕಾರವನ್ನೇ ಪ್ರಭುತ್ವ ಎನ್ನುವುದು.[4]

ಈ ಅಧಿಕಾರವು ಹೆಚ್ಚು ಪ್ರಭಾವ ಬೀರಲು, ಅದನ್ನು 'ನೈಜ' ಅಥವಾ ಗೋಚರಿಸುವಂತೆ ಮಾಡಲು ಭೌತಿಕವಸ್ತುಗಳ ಮೂಲಭೂತ ಲಕ್ಷಣವಾದ ಪ್ರದೇಶದಲ್ಲಿನ ಸ್ಥಾನ ಮತ್ತು ಅದರ ವ್ಯಾಪ್ತಿವಿಸ್ತರಣೆ ಪ್ರಭುತ್ವಕ್ಕೆ ದತ್ತವಾಗಿದೆ. ನಾಗರೀಕತೆಯಲ್ಲಿ ಪ್ರಭುತ್ವದ ರಾಜಕೀಯ ಅಧಿಕಾರವು ಒಂದು ಪ್ರಾದೇಶಿಕವಾಗಿ ಅಥವಾ ಒಂದು ಭೌಗೋಳಿಕ ಪ್ರದೇಶಕ್ಕೋ ಸಂಬಂಧಿಸಿದ್ದಾಗಿರುತ್ತದೆ. ಪ್ರಭುತ್ವವನ್ನು ಪ್ರದೇಶದಲ್ಲಿ ಇರಿಸುವುದರಿಂದ ಅದು ಮೂರ್ತರೂಪ ಪಡೆಯುತ್ತದೆ. ಅಧಿಕಾರದ ಪ್ರಾದೇಶಿಕೀಕರಣವು, ಅನಿಯಂತ್ರಿತ ಅಧಿಕಾರದ ಸಮರ್ಥನೆ ಮತ್ತು ಅದು ಸಫಲವಾದರೆ, ಅಧಿಕಾರವನ್ನು ಚಲಾಯಿಸುವುದಕ್ಕೆ ಅವಕಾಶವನ್ನು ಒದಗಿಸುತ್ತದೆ. ಪ್ರಾದೇಶಿಕವಾಗಿ ಅಧಿಕಾರ ಹೊಂದಿದ್ದರೆ ಭೌತಿಕವಸ್ತುಗಳ, ಆಗು–ಹೋಗುಗಳ ಮತ್ತು ಸಂಬಂಧಗಳ ವಿವರಗಳು ನಿರ್ದಿಷ್ಟವಾಗಿಯೇ ಇರಬೇಕಾದ ಅಗತ್ಯವೇನೂ ಇಲ್ಲ, ಅವೆಲ್ಲವೂ ಪ್ರಭುತ್ವದ ಅಧಿಕಾರಕ್ಕೆ ಒಳಪಡುತ್ತವೆ. ಪ್ರದೇಶದ ಗಡಿಯ ಒಳಗಿದ್ದರೆ ಗೊತ್ತಿರುವುದು, ಗೊತ್ತಿಲ್ಲದ್ದು ಎಲ್ಲವೂ ಅಧಿಕಾರದ ವ್ಯಾಪ್ತಿಗೆ ಬರುತ್ತದೆ. ಅಧಿಕಾರವನ್ನು ಈ ರೀತಿ ಎಲ್ಲೆ ಇರದಂತೆ ಸಮರ್ಥಿಸುವ ಅಗತ್ಯತೆ ನಾಗರೀಕತೆಯ ರಾಜಕೀಯ ಚಟುವಟಿಕೆಗಳಿಗೆ ಇದೆ. ಏಕೆಂದರೆ ನವೀನ ಮತ್ತು ಅನಿರೀಕ್ಷಿತ ಘಟನೆಗಳನ್ನು ಅದು ಎದುರಿಸಬೇಕಾಗುವುದನ್ನು ಅದು ಒಳಗೊಂಡಿರುತ್ತದೆ; ಮತ್ತು ಅಂತಹ ನಿರ್ದಿಷ್ಟವಲ್ಲದ ಪ್ರಭಾವ ವಲಯವನ್ನು ವಶಪಡಿಸಕೊಳ್ಳಲು ಸಾಧ್ಯವಾಗುವುದು ಪ್ರಾದೇಶಿಕವಾಗಿ ಅಥವಾ ಒಂದು ನಿದಿರ್ಷ್ಟ ಭೌಗೋಳಿಕ ಪ್ರದೇಶದ ಮೇಲಿನ ಅಧಿಕಾರದಿಂದಲೇ. ಒಂದು ಪ್ರಭುತ್ವವು,  ಅದು ಬೇರೆ ಏನೇ ಆದರೂ ಅಥವಾ ಇನ್ನೇನೋ ಮಾಡಿದರೂ ಅದು ಪ್ರಾದೇಶಿಕವೇ.

ಸಮಾಜ ಮತ್ತು ಸ್ಥಳದ ನಡುವೆ ಸಂಬಂಧವನ್ನು ಕಲ್ಪಸಿವುದು ಆದಿಮ ಸಮಾಜಗಳಿಗಿಂತ ನಾಗರೀಕತೆಯಲ್ಲಿ ಒಂದು ಪ್ರಜ್ಞಾಪೂರ್ವಕವಾದ ಪ್ರಕ್ರಿಯೆ. ಮತ್ತು ನಾಗರಿಕತೆಯ ಕಾರ್ಯವು ಒಂದು ಶಕ್ತಿ ಮತ್ತು ಅಧಿಕಾರವನ್ನು ಮೂರ್ತೀಕರಣಗೊಳಿಸುವುದೇ ಆಗಿರುತ್ತದೆ; ಆದರೆ ನಾಗರಿಕತೆಯು ವಿಸ್ತಾರ ಮತ್ತು ಸಂಕೀರ್ಣವಾಗಿರುವುದರಿಂದ ಅದು ಸ್ಪಷ್ಟ ಮತ್ತು ಸ್ವಯಂವ್ಯಕ್ತವಾಗಿರುವುದಿಲ್ಲ. ಪ್ರಜ್ಞಾಪೂರ್ವಕವಾಗಿ ಸಮಾಜಕ್ಕೆ ಒಂದು ಪ್ರಾದೇಶಿಕ ಸ್ವರೂಪವನ್ನು ಕೊಡುವ ಪ್ರವೃತ್ತಿಯು *'ಪ್ರದೇಶದ ಸಾಮಾಜಿಕ ಅರ್ಥವಿವರಣೆಗಿಂತಲೂ'* ಹೆಚ್ಚಾಗಿ *'ಸಮಾಜದ ಪ್ರಾದೇಶಿಕ ಅರ್ಥವಿವರಣೆಗೆ'* ಒತ್ತು ಕೊಟ್ಟಂತೆ. ಈ ಸಮಾಜದ ಪ್ರಾದೇಶಿಕ ಅರ್ಥವಿವರಣೆಯ ಪ್ರಕಾರ, ಒಂದು ಪ್ರದೇಶದೊಳಗೆ ಸಾಮಾಜಿಕ ಸಂಬಂಧಗಳು ಪ್ರಮುಖವಾಗಿ ಒಂದು ಜಾಗದಿಂದ ನಿರ್ಧಾರವಾಗುತ್ತವೆಯೇ ಹೊರತು ಮುಂಚಿನ ಸಾಮಾಜಿಕ ಸಂಬಂಧಗಳಿಂದಲ್ಲ, ಆದರೆ ಪ್ರದೇಶದ ಸಾಮಾಜಿಕ ಅರ್ಥವಿವರಣೆಯ ಪ್ರಕಾರ, ಒಂದು ಪ್ರದೇಶ ಅಥವಾ  ಜಾಗವನ್ನು ಬಳಸಲು ಮೊಟ್ಟ ಮೊದಲಿಗೆ ಆ ಗುಂಪಿನವರಾಗಿರಬೇಕು (ಈ ನಿರ್ಧಾರ ಅತ್ಯವಶ್ಯಕವಾಗಿ ಪ್ರದೇಶಕ್ಕೆ ಸಂಬಂಧಿಸದಂತೆ ಇರುತ್ತದೆ). ನಾಗರೀಕತೆಯಲ್ಲಿ ಮನುಷ್ಯನ ಅಧಿವಾಸವೇ (domicile) ಹೆಚ್ಚಿನ ಸಮಯಗಳಲ್ಲಿ ಆತನ ಸಾಮಾಜದ ಸಂಸ್ಥೆಗಳ ಸದಸ್ಯತ್ವವನ್ನು ನಿರ್ಧರಿಸುತ್ತದೆ. ಪ್ರತಿಯೊಂದು ಜಾಗವೂ ಹಲವಾರು ಅತಿವ್ಯಾಪಿಸುವ ಅಥವಾ ಶ್ರೇಣೀಕೃತ ಅಧಿಕಾರ ವ್ಯಾಪ್ತಿಯ ಭಾಗವಾಗಿರಬಹುದು ಮತ್ತು ಹಾಗಾಗಿ ಒಂದು ಜಾಗದ ನಿವಾಸಿಯು ಹಲವಾರು ಸಮುದಾಯಗಳ ಭಾಗವಾಗಿರುತ್ತಾರೆಂದು ಅರ್ಥೈಸಬಹುದು.

**Commented [AKAP10]:** Find a more natural alternative.

ಪ್ರದೇಶ ಆಧಾರಿತವಾಗಿ ಅಧಿಕಾರವನ್ನು ವಿವರಿಸುವುದು ನಾಗರೀಕತೆಯ ಲಕ್ಷಣವಾದರೂ ಸಮಾಜದ ಪ್ರತೀ ಸದಸ್ಯರೂ ಇದನ್ನು ಎಷ್ಟರ ಮಟ್ಟಿಗೆ ಅರಿತಿದ್ದಾರೆಂಬುದು ಬಹಳ ವ್ಯಾಪಕವಾಗಿಯೇ ಬದಲಾಗುತ್ತದೆ. ಇಂದಿನ ಆಧುನಿಕ ರಾಷ್ಟ್ರ ಪ್ರಭುತ್ವವು ಅದರ ನಾಗರಿಕರಿಗೆ ಪ್ರಭುತ್ವದ ಕೇಂದ್ರೀಕೃತ ಅಧಿಕಾರ ಮತ್ತು ಅದರ ಪ್ರಾದೇಶಿಕ ವ್ಯಾಪ್ತಿಯ ಬಗ್ಗೆ ತಿಳಿಸಿಕೊಡುವಷ್ಟು ಹಿಂದಿನ ಯಾವುದೇ ನಾಗರಿಕತೆಗಳು ಪ್ರಯತ್ನ ಮಾಡಿಲ್ಲ. ಆದರೂ ಕೂಡ ಇಪ್ಪತ್ತನೇ ಶತಮಾನದಲ್ಲಿ ಬಹಳಷ್ಟು ರಾಷ್ಟ್ರಗಳು ಬುಡಕಟ್ಟು ಮತ್ತು ಒಕ್ಕಲುತನದ ಸಂಸ್ಕೃತಿಗಳನ್ನು ಒಳಗೊಂಡಿದೆ. ಅವು ರಾಜಕೀಯ ಪ್ರಾದೇಶಿಕತೆ ಮತ್ತು ಭೂಮಿಯ ಅನುಭೋಗದ ಆಧುನಿಕ ಪರಿಕಲ್ಪನೆಗಳಿಂದ  ಹೆಚ್ಚು ಪ್ರಭಾವಿತವಾಗಿಲ್ಲ.

ಅಭಿವೃದ್ಧಿ ಹೊಂದುತ್ತಿರುವ ಪ್ರಭುತ್ವಗಳು ಬುಡಕಟ್ಟು ಸಂಸ್ಕೃತಿಗಳನ್ನು ಒಳಗೊಂಡಿರುವುದರೊಂದಿಗೆ ಬಹುದೊಡ್ಡ ರೈತ ಜನಸಂಖ್ಯೆಯನ್ನು ಹೊಂದಿದ್ದು ಸ್ಥಳದ ಬಗೆಯಿರುವ ಈ ರೈತ ಸಮಾಜಗಳ ಪರಿಕಲ್ಪನೆಯು ಆದಿಮ ಮತ್ತು ಆಧುನಿಕ ಇವೆರಡರ ಮಿಶ್ರಣವಾಗಿದೆ. ರೈತರಲ್ಲಿ ಸ್ಥಳದ ಪರಿಕಲ್ಪನೆಯು ಹಳ್ಳಿ ಮತ್ತು ಅದರ ಸುತ್ತಲಿನ ಪರಿಸರಕ್ಕೆ ಸೀಮಿತಗೊಂಡಿರುತ್ತದೆ. ಭೂಮಿಯೊಂದಿಗಿನ ಅವರ ಸಂಬಂಧವು ಅತಿ ಆಪ್ತವೂ ವೈಯಕ್ತಿಕವೂ ಮತ್ತು ಅನೇಕ ವೇಳೆ ಅಧ್ಯಾತ್ಮಿಕವೂ ಆಗಿರುತ್ತದೆ. ಆದರೂ, ಅವರ ಬದುಕುಗಳ ಒಂದು ಭಾಗ  ನಗರ ಮತ್ತು ಪ್ರಭುತ್ವದೊಂದಿಗಿನ ಸಂಪರ್ಕಗಳ ಮೇಲೆ ಆಧಾರಿತವಾಗಿರುತ್ತದೆ.  ಈ ರೀತಿಯ ಸಂಪರ್ಕಗಳಿಂದ ಕೆಲವು 'ಆಧುನಿಕ' ಪರಿಕಲ್ಪನೆಗಳು ರೈತ ಸಮುದಾಯಗಳ ಹೆಚ್ಚು ಸಾಂಪ್ರದಾಯಿಕ ಮತ್ತು ಅಂತರ್ಮುಖಿ ದೃಷ್ಟಿಕೋನದೊಂದಿಗೆ ಬೆರೆತಿವೆ.

ಪುರಾತನ ರಾಜ್ಯಗಳಲ್ಲಿ ನಾಗರೀಕ ಮತ್ತು ಆದಿಮ – ಇವೆರಡರ ಮಿಶ್ರಣ ತುಸು ಹೆಚ್ಚೇ ಇತ್ತು. ನಾಗರಿಕತೆಗಳು ನಿಧಾನವಾಗಿ ಬೆಳೆಯುತ್ತಿದ್ದು ಅವು ಆದಿಮ ಸಮಾಜಗಳನ್ನು ಭಾಗಶಃ ಮಾತ್ರ ಬದಲಾಯಿಸಿತು. ಅನೇಕ ವೇಳೆ, ಈ ಎರಡೂ ಸಮಾಜಗಳು ಒಟ್ಟೊಟ್ಟಿಗೆ ಇದ್ದವು ಅಥವಾ ಆದಿಮ ಸಮುದಾಯಗಳ ಮಾದರಿಗಳು ರಾಜ್ಯಗಳ ಪ್ರಾದೇಶಿಕ ಮಿತಿಯೊಳಗೆ ಸ್ಥಳೀಯ ಮತ್ತು ಗ್ರಾಮೀಣ ಮಟ್ಟದಲ್ಲಿ ಇದ್ದವು. ಆದಿಮದಿಂದ ನಾಗರೀಕತೆಗೆ ಆದ ಮೂಲ ರೂಪಾಂತರಗಳ ಹೆಚ್ಚಿನ ವಿವರಗಳು ಕಳೆದುಹೋಗಿವೆ ಹಾಗೂ ಕೇವಲ ಆ ಪ್ರಕ್ರಿಯೆಯ ಒಂದು ಸಾಮಾನ್ಯ ಕಲ್ಪನೆ ಅಷ್ಟೇ ನಮಗಿದೆ. ಈ ಸಂದರ್ಭಗಳಲ್ಲಿ, ಸಮಾಜವನ್ನು ಸ್ಥಳದೊಂದಿಗೆ ಸಂಬಂಧಿಸುವುದರ ಜೊತೆಜೊತೆಗೆ ಆದ ಬದಲಾವಣೆಗಳಿಗೂ ಸಹ ಪುರಾವೆಗಳಿವೆ.

ಉದಾಹರಣೆಗೆ, ಪುರಾತನ ಈಜಿಪ್ಟಿನಲ್ಲಿ ಮೂಲ ಬುಡಕಟ್ಟುಗಳ ಅಥವಾ ಕುಲಗಳ ಪ್ರಾದೇಶಿಕ ಘಟಕಗಳು *'ಸ್ಪಾಟ್ಸ್ (spats)'* ಅಥವಾ *'ನೋಮ್ಸ್ (nomes)'* ಎಂದು ಕರೆಯಲ್ಪಡುತ್ತಿದ್ದವು. ಈಜಿಪ್ಟ್ ಬುಡಕಟ್ಟು ಸಮಾಜದಿಂದ ಬದಲಾಗಿ ಕೇಂದ್ರೀಕೃತ ಸಾಮ್ರಾಜ್ಯವಾಗಿ ಬೆಳೆಯುತ್ತಿದ್ದಂತೆ ಮೂಲ ಪ್ರಾದೇಶಿಕ ಘಟಕವಾದ *'ಸ್ಪಾಟ್'* ಉಳಿದರೂ ಜನರೊಡನೆ ಅದು ಹೊಂದಿದ್ದ ಸಂಬಂಧದಲ್ಲಿ ಬದಲಾವಣೆಯಾಯಿತು. ಈ ಘಟಕಗಳು ಬುಡಕಟ್ಟು ಒಡೆತನದ ಸೀಮೆಯಾಗಿ ಉಳಿಯಲಿಲ್ಲ, ಅದರ ಬದಲಿಗೆ ಸಾಮ್ರಾಜ್ಯದ ಆಡಳಿತದ ಕ್ಷೇತ್ರ ಅಥವಾ ಒಂದು ಪ್ರಾಂತ್ಯವಾಗಿ ಮಾರ್ಪಾಡಾದವು;  ಹಾಗೂ *'ಸ್ಪಾಟ್'* ನ ನಾಯಕರುಗಳ ಸ್ಥಾನವು ಹಿಂದಿನ ಬುಡಕಟ್ಟು ಸಮುದಾಯಗಳ ಮುಖ್ಯಸ್ಥರಿಂದ ಪ್ರಾಂತ್ಯದ ಆಡಳಿತಗಾರರು ಅಥವಾ ರಾಜ್ಯಪಾಲಕರುಗಳಿಗೆ ಕೈ ಬದಲಾದವು.

ಗ್ರೀಸ್‌ನಲ್ಲಿ, ಅದರಲ್ಲೂ ಮುಖ್ಯವಾಗಿ ಅಟಿಕಾ (Attica) ದಲ್ಲಿ ಬುಡಕಟ್ಟು ಸಮಾಜವು ನಾಗರಿಕ ಸಮಾಜವಾಗಿ ಬದಲಾದ ಸನ್ನಿವೇಶದ ದಾಖಲೆ ದೊರೆಯುತ್ತದೆ. ಅಥೆನ್ಸ್‌ನ ಸಮಾಜವು (Athenians) ಬುಡಕಟ್ಟು ಮಾದರಿಯ ಸಂರಚನೆಗಳನ್ನೇ ಹೊಂದಿದ್ದರೆಂಬುದರ ಕುರುಹು ಈ ಚಾರಿತ್ರಿಕ ದಾಖಲೆಯ ಮೊದಲಿನಲ್ಲಿ ದೊರಕುತ್ತದೆ. ವೀರರ (Heroic (ಹೆರೋಯಿಕ್)) ಕಾಲಘಟ್ಟದಲ್ಲಿ ಪ್ರಮುಖವಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆಗೊಂಡಿದ್ದ ಅವರು ನಾಲ್ಕು ಬುಡಕಟ್ಟುಗಳಾಗಿ ಸಂಘಟಿತರಾಗಿದ್ದರು. ಈ ಬುಡಕಟ್ಟುಗಳು ಬಣ (phratries(ಫ್ರಾಟ್ರೀಸ್)) ಮತ್ತು ಕುಲಗಳಾಗಿ ಸಂಘಟಿತವಾಗಿದ್ದವು ಮತ್ತು *'ಬೂಲೆ (Boule)'* ಅಥವಾ ಒಂದು ಬುಡಕಟ್ಟು ಮಂಡಲಿಯು ಅಥೆನ್ಸ್‌ನ ಪ್ರಭುತ್ವ ಮಾದರಿಯಾಗಿತ್ತು.

ಅಥೆನ್ಸ್‌ನ ಸಮಾಜವು ಬೆಳೆಯುತ್ತಾ ಸಂಕೀರ್ಣಗೊಳ್ಳುತ್ತಿದ್ದಂತೆ, ಅದರ ನಿವಾಸಿಗಳು ಭೌಗೋಳಿಕವಾಗಿ ಬೆರೆತು ಹೋದರು, ಆದರೆ ಹೆಚ್ಚು ಸ್ಪಷ್ಟವಾಗಿ ರಾಜಕೀಯ ಅಧಿಕಾರವು ಮತ್ತು ಆರ್ಥಿಕ ಶಕ್ತಿಯು ಕೆಲವೇ ಮೇಲು ವರ್ಗದವರ ಬಳಿ ಕೇಂದ್ರೀಕೃತವಾದ ವರ್ಗ ಶ್ರೇಣಿಗಳಾಗಿ ಪ್ರತ್ಯೇಕಗೊಂಡರು. ಪ್ರದೇಶಗಳ ಸಾಮಾಜಿಕ ಬದಲಾವಣೆಗಳು *'ನೌಕ್ರೇರಿಯ್ಯಾಯ್ (Naukraria)'* ಗಳಂತಹ ವ್ಯವಸ್ಥೆಗಳನ್ನು ಪರಿಚಯಿಸುವುದರ ಮೂಲಕ ವ್ಯಕ್ತವಾದವು. ಸೋಲನ್ (Solon – ಅಥೆನ್ಸ್‌ನ ಒಬ್ಬ ಚಾಣಕ್ಷ, ನ್ಯಾಯ ಶಾಸಕ ಮತ್ತು ಕವಿ) ಗಿಂತ ತುಸು ಮುನ್ನ ಸ್ಥಾಪನೆಗೊಂಡ *'ನೌಕ್ರೇರಿಯ್ಯಾಯ್'* ಗಳು "ಒಂದೊಂದು ಬುಡಕಟ್ಟಿಗೆ ಹನ್ನೆರಡರಂತಿದ್ದ ಪುಟ್ಟ ಪ್ರಾದೇಶಿಕ ಜಿಲ್ಲೆಗಳಾಗಿದ್ದವು." ಇವು ಅಥೆನ್ಸ್ ನಗರಕ್ಕೆ ಯುದ್ಧದ ಹಡಗುಗಳನ್ನು ಮತ್ತು ಕುದುರೆಸವಾರರನ್ನು ಒದಗಿಸುವ ಜವಾಬ್ದಾರಿ ಹೊಂದಿದ್ದವು. ಎಂಗೆಲ್ಸ್ ಪ್ರಕಾರ ಈ ವ್ಯವಸ್ಥೆಯು ಸಮಾಜವು ಪ್ರಾದೇಶಿಕವಾಗಿ ಬದಲಾದ ವಿವರಣೆಯು ದಾಖಲಾಗಿರುವ ಮೊದಲ ಉದಾಹರಣೆಗಳಲ್ಲೊಂದು. ಇವು ಹಿಂದಿನ ಬುಡಕಟ್ಟು ಮಾದರಿಯ ಸಂಘಟನೆಯನ್ನು ಎರಡು ರೀತಿಯಲ್ಲಿ ನಾಶ ಮಾಡಲು ಪ್ರಯತ್ನಿಸಿತು. ಮೊದಲಿಗೆ, "ಇನ್ನು ಮುಂದೆ ಒಂದು ಇಡಿಯಾದ ಶಸ್ತ್ರಸಜ್ಜಿತ ಜನಾಂಗದವರ ಯಾವುದೇ ಕುರುಹುಗಳು ಇರದಂತಹ ಒಂದು ಸಾರ್ವಜನಿಕ ಶಕ್ತಿಯನ್ನು ಹುಟ್ಟುಹಾಕಿತು; ಎರಡನೆಯದಾಗಿ, ಇದೇ ಮೊದಲ ಬಾರಿಗೆ ಅದು ಜನಾಂಗವನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಬಾಂಧವ್ಯ ಗುಂಪಿನ ಆಧಾರದ ಮೇಲೆ ಅಲ್ಲದೆ 'ಒಂದೇ ಸಾಮಾನ್ಯ ವಾಸಸ್ಥಳದ' ಆಧಾರದ ಮೇಲೆ ವಿಭಜಿಸಲಾಯಿತು.

ಕ್ಲೈಸ್ತನೀಸ್ (Cleisthenes) ಹಿಂದಿನ ಬುಡಕಟ್ಟು ಪ್ರದೇಶಗಳೆಲ್ಲವನ್ನೂ ಕಡೆಗಣಿಸುವ ಹೊಸ ಸಂವಿಧಾನವನ್ನು ರೂಪಿಸಿದನು. ಈ ಹೊಸ ಸಂವಿಧಾನವು ಸಮಾಜದ ಪ್ರಾದೇಶಿಕ ವ್ಯವಸ್ಥೆಯ ಆಧಾರದ ಮೇಲೆ ಸ್ಥಾಪಿತವಾಯಿತು. "ಈಗ ಜನರನ್ನಲ್ಲದೆ ಪ್ರದೇಶವನ್ನು ವಿಭಜಿಸಲಾಯಿತು: ನಿವಾಸಿಗಳು ಪ್ರದೇಶಕ್ಕೆ ಕೇವಲ ರಾಜಕೀಯದ ಉಪಾಂಗವಾಗಿಯಷ್ಟೇ ಉಳಿದರು". ಆದರೂ, ಅವರು ಬಾಳುವ ಭೂಪ್ರದೇಶದೊಡನೆ ಇರುವ ಭಾವನಾತ್ಮಕ ಸಂಬಂಧವನ್ನು ಉಳಿಸಿಕೊಂಡು ಹೋಗಲು ಸಮಾಜದ ಹೊಸ ಪ್ರಾದೇಶಿಕ ವಿವರಣೆಯು ಹಿಂದಿನ ಪ್ರದೇಶದ ಸಾಮಾಜಿಕ ವಿವರಣೆಯನ್ನು ಅವಲಂಬಿಸಬೇಕಿತ್ತು. . ಹಾಗಾಗಿ ವಾಸಸ್ಥಳದೆಡೆಗಿನ ಭಾವನೆಗಳನ್ನು ಜೀವಂತವಾಗಿಡಲು ಈ ಹೊಸ ಪ್ರದೇಶವು 'ಸ್ಥಳೀಯ' ಬುಡಕಟ್ಟು ಮಾದರಿಯ ರಚನೆಯದ್ದಾಗಿತ್ತು. ಆದರೆ ಈ ಪ್ರದೇಶ ಅಥವಾ ಬುಡಕಟ್ಟು ಮಾದರಿಯ ರಚನೆಯು ಒಂದು ಕೃತಕ ಭೌಗೋಳಿಕ ಘಟಕವಾಗಿ ಪ್ರಭುತ್ವದ ಅನುಕೂಲಕ್ಕಾಗಿ ಇದ್ದಿತು. ಕೊನೆಗಾಣಿಸಿದ ಹಿಂದಿನ

ಬುಡಕಟ್ಟುಗಳಲ್ಲಿನಂತೆ ಸಾಂಪ್ರದಾಯಿಕವಾಗಿ ಈ ಭೂಪ್ರದೇಶವೇನೂ ಸಂಬಂಧಿಕರ ಒಂದು ಗುಂಪಿಗೆ ಸೇರಿದ್ದಾಗಿರಲಿಲ್ಲ. *'ಡೇಮ್ಸ್ (demes)'* ಎಂದು ಕರೆಯಲ್ಪಡುವ ಸುಮಾರು 100 ಜಿಲ್ಲೆಗಳು ಈ ಪ್ರಾದೇಶಿಕ ವ್ಯವಸ್ಥೆಯ ಮೂಲವಾಗಿದ್ದವು. ಪ್ರತಿ *'ಡೇಮ್ಸ್'* ನ ನಿವಾಸಿಗಳು ಅಧ್ಯಕ್ಷ, ಖಜಾಂಚಿ ಮತ್ತು ನ್ಯಾಯಾಧೀಶರನ್ನು ಆಯ್ಕೆಮಾಡುತ್ತಿದ್ದರು. ಮತ್ತೆ ಹಿಂದಿನ ಅವರ ಪ್ರದೇಶದೆಡೆಗಿನ ಬುಡಕಟ್ಟು ನಂಟುಗಳನ್ನು ಬಳಸಿಕೊಳ್ಳಲು ಪ್ರತೀ *'ಡೇಮ್ಸ್'* ಅವರದೇ ದೇವಾಲಯ ಮತ್ತು ಆಶ್ರಯದಾತ ಅಥವಾ ದಿವ್ಯಶಕ್ತಿ ಹೊಂದಿದ್ದವು. ಎಲ್ಲ *'ಡೇಮ್ಸ್'* ಗಳನ್ನು ಮೂವತ್ತು *'ಟ್ರಿಟೀಸ್ (trittys)'* ಗಳಾಗಿ ವಿಭಾಗಿಸಲಾಗಿತ್ತು. ಇವು ಸುಮಾರುಒಂದೇ ಸಮವಾದ ಜನಸಂಖ್ಯೆಯನ್ನು ಹೊಂದಿದ್ದವು ಮತ್ತು ಈ *'ಟ್ರಿಟೀಸ್'* ಗಳನ್ನು ಹತ್ತು 'ಸ್ಥಳೀಯ ಬುಡಕಟ್ಟು'ಗಳನ್ನಾಗಿ ರೂಪಿಸಲಾಗಿತ್ತು. ಸ್ಥಳೀಯ ಬುಡಕಟ್ಟುಗಳು ಶಸ್ತ್ರಾಸ್ತ್ರಗಳನ್ನೂ ಮತ್ತು ಸೈನಿಕರನ್ನೂ ಸೇನೆಗೆ ಪೂರೈಸುತ್ತಿದ್ದವು. ಹಾಗೆಯೇ ಅಥೆನ್ಸ್‌ನ ಮಂಡಲಿಗೆ ಐವತ್ತು ಪ್ರತಿನಿಧಿಗಳನ್ನು ಆಯ್ಕೆಮಾಡಿ ಕಳುಹಿಸುತ್ತಿದ್ದವು. ಹತ್ತು ಸ್ಥಳೀಯ ಬುಡಕಟ್ಟುಗಳಿಂದಲೂ ತಲಾ ಐವತ್ತರಂತೆ ಒಟ್ಟು 500 ಸದಸ್ಯರು ಈ ಮಂಡಲಿಯಲ್ಲಿದ್ದರು.

ಸಮಾಜ ಮತ್ತು ಪ್ರದೇಶದೊಂದಿಗಿನ ಇಂತಹ ಬದಲಾವಣೆಗಳನ್ನು ಪ್ರಪಂಚದ ಇತರ ಭಾಗಗಳಲ್ಲೂ ಕಾಣಬಹುದು. ಸಮಾಜದ ಪ್ರಾದೇಶಿಕ ಅರ್ಥವಿವರಣೆಗೆ ಒತ್ತು ನೀಡುವ ನಾಗರೀಕತೆಯು, ಸಾಮಾಜಿಕ ವ್ಯವಸ್ಥೆಯು ಒಂದು ಸ್ಥಳಕ್ಕೇ ಬದ್ಧವಾಗಿರುವಂತೆ ಮಾಡುತ್ತದೆ. ಸಮುದಾಯದಲ್ಲಿನ ಸದಸ್ಯತ್ವವು ಸಾಮಾನ್ಯವಾಗಿ ಅಧಿವಾಸದಿಂದಲೇ ನಿರ್ಧಾರವಾಗುತ್ತದೆ ಮತ್ತು ಪ್ರದೇಶದ ಗಡಿಗಳ ಭದ್ರತೆಯು (ಬುಡಕಟ್ಟು ಸಮಾಜಗಳಲ್ಲಿದ್ದ ಅಸ್ಪಷ್ಟ ಪರಿಕಲ್ಪನೆಗಳಂತಲ್ಲದೆ) ಪ್ರಭುತ್ವದ ಮೂಲ ಕರ್ತವ್ಯಗಳಲ್ಲೊಂದಾಗುತ್ತದೆ. ಪ್ರದೇಶದ ಮೇಲಿನ ಆಕ್ರಮಣ ಪ್ರಭುತ್ವದ ವ್ಯವಸ್ಥೆ ಮತ್ತು ಅಧಿಕಾರದ ಮೇಲಿನ ಸವಾಲು ಎಂದು ಪರಿಗಣಿಸಲಾಗುತ್ತದೆ.

ಸಮಾಜದ ಸಂಕೀರ್ಣತೆ, ಅಸಮಾನತೆ ಮತ್ತು ಒಂದು ಗುಂಪನ್ನು ಮತ್ತೊಂದು ಗುಂಪು ಅಧೀನದಲ್ಲಿಟ್ಟುಕೊಳ್ಳುವ ಅಗತ್ಯತೆ ಬಯಸುವುದು ನಾಗರೀಕತೆಯಲ್ಲಿ ಸಮಾಜದ ಪ್ರಾದೇಶಿಕ ಅರ್ಥವಿವರಣೆಯನ್ನು ಅತ್ಯಗತ್ಯ ಮಾಡುತ್ತವೆ. ವಿರೋಧಾಭಾಸವೆಂದರೆ, ನಾಗರೀಕತೆಯಲ್ಲಿ ಸಮಾಜ ಮತ್ತು ಸ್ಥಳದ ಬೆಸುಗೆಯನ್ನು ಆದಿಮ  ಜಗತ್ತಿಗಿಂತಲೂ ಹೆಚ್ಚು ತಾತ್ಕಾಲಿಕವೂ ಮತ್ತು ಅಸ್ಥಿರವೂ ಮಾಡುವುದು ಇದೇ ಶಕ್ತಿಗಳೇ. ಒಂದೆಡೆ ಪ್ರಾದೇಶಿಕ ಗಡಿಗಳು ಸರಕುಗಳ ಅನಿಯಂತ್ರಿತ ಹರಿವು ಮತ್ತು ಸಾಗಣೆಗೆ ತಡೆಯನ್ನು ಒಡ್ಡಿದರೆ, ಮತ್ತೊಂದೆಡೆ ಚಟುವಟಿಕೆಗಳನ್ನು ಒಂದೊಂದು ಸ್ಥಳಕ್ಕೆ ವಿಭಾಗಿಸುವುದರಿಂದ ವಿಶೇಷ ಪರಿಣತಿಗೆ ಅನುವು ಮಾಡಿಕೊಟ್ಟು ವ್ಯಾಪಾರ ಮತ್ತು ವಹಿವಾಟುಗಳ ಬೇಡಿಕೆಯನ್ನು ಹೆಚ್ಚಿಸುತ್ತವೆ. ಒಂದು ಪ್ರದೇಶಕ್ಕೇ ಸೀಮಿತವಾದ ಅಥವಾ ತಳ ಊರಿದ ಚಟುವಟಿಕೆಗಳನ್ನು ಸಾಮಾಜಿಕ ಮಟ್ಟದಲ್ಲಿ ಆ ಸ್ಥಳಕ್ಕೇ ವಿಶಿಷ್ಟವಾದದ್ದು, ಪ್ರಾದೇಶಿಕವಾದದ್ದು ಇಲ್ಲವೇ ಸಾಮಾನ್ಯವಾಗಿ ಹೇಳುವುದಾದರೆ ಸ್ಥಳಕ್ಕೆ ಸಂಬಂಧಿಸಿದ ಕಸುಬು ಎಂದು ಗುರುತಿಸಲಾಗುತ್ತದೆ. ಆದರೆ ಯಾವುದರ ಹರಿವು ಮತ್ತು ಸಂಚಲನವನ್ನು ಒಂದೆಡೆಗೇ ಸೀಮಿತಗೊಳಿಸುವುದಿಲ್ಲವೋ ಅಂತಹವುಗಳ ಬಗ್ಗೆ ಹೆಚ್ಚು ಸ್ಥಳಕ್ಕೆ ಸಂಬಂಧಿಸದ (less spatial) ಅಥವಾ ಸ್ಥಳಕ್ಕೆ ಸಂಬಂಧಿಸದೆ ಇರುವ (non-spatial) ಚಟುವಟಿಕೆಗಳು ಎಂದು ಹೇಳಬಹುದು.

ಮೇಲಾಗಿ, ಪ್ರಾದೇಶಿಕ ಅಥವಾ ಸ್ಥಳಕ್ಕೆ ಸಂಬಂಧಿಸಿದ ದೃಷ್ಟಿಯಿಂದ ವಿವಿಧ ಮಟ್ಟದಲ್ಲಿ 'ಪ್ರದೇಶದ ಸ್ವರೂಪವು (spatiality)' ರೂಪುಗೊಳ್ಳುತ್ತದೆ. ನಾಗರೀಕತೆಗಳು ಒಟ್ಟೊಟ್ಟಿಗೇ ಹಲವು ಬಗೆಯ ಪ್ರಾದೇಶಿಕ

ಘಟಕಗಳನ್ನು ಹೊಂದಿರುತ್ತವೆ. ಉದಾಹರಣೆಗೆ, ಆಧುನಿಕ ರಾಷ್ಟ್ರ ಪ್ರಭುತ್ವಗಳು ಹಲವಾರು ಉಪ–ಆಡಳಿತ ವ್ಯಾಪ್ತಿಗಳಾಗಿ ವಿಭಾಗಿಸಲ್ಪಡುತ್ತದೆ ಮತ್ತು ಇವು ಇನ್ನೂ ಸಣ್ಣ ಜಿಲ್ಲೆಗಳಾಗಿ ಹೀಗೆ ಪ್ರಾದೇಶಿಕ ಘಟಕಗಳನ್ನೊಳಗೊಂಡ ನಿದಿರ್ಷ್ಟ ಶ್ರೇಣೀಕೃತ ಭೌಗೋಳಿಕ ಪ್ರದೇಶಗಳಾಗಿ ರಚಿಸಲ್ಪಡುತ್ತದೆ, ಮತ್ತು ಇವುಗಳ ಕಾರ್ಯಗಳು ಅನೇಕ ವೇಳೆ ಸಮನ್ವಯವಿರದೆ ಪರಸ್ಪರ ವಿರುದ್ಧ ದಿಕ್ಕಿನಲ್ಲಿರುತ್ತವೆ. ಆಡಳಿತವ್ಯಾಪ್ತಿಯ ವಿವಿಧ ಹಂತಗಳಲ್ಲಿ ಅಥವಾ ಒಂದೇ ಕೆಳ ಹಂತದ ಉಪವಿಭಾಗಗಳಾಗಿ ವಿಭಜಿಸಲ್ಪಟ್ಟ ರಾಷ್ಟ್ರೀಯ ಪ್ರದೇಶವು ಹೆಚ್ಚು ಕಡಮೆ ಸ್ಥಳಕ್ಕೆ ಸಂಬಂಧಿಸಿದ್ದೇ ಎಂದು ಭಾವಿಸಲಾಗುವಂತಹ ಸನ್ನಿವೇಶಗಳನ್ನು ಹುಟ್ಟುಹಾಕಬಲ್ಲುದು. ರಾಷ್ಟ್ರೀಯ ಮಟ್ಟದಲ್ಲಿ ನಿರೂಪಿತವಾದ ನೀತಿಗಳು ಆ ಹಂತದಲ್ಲಿ ನಿರೀಕ್ಷಿತ ಸ್ಥಳಕ್ಕೆ ಸಂಬಂಧಿಸಿದ ಪರಿಣಾಮಗಳನ್ನೇ ತೋರಿದರೂ ಕೆಳ ಹಂತದ ಭೂ ಪ್ರದೇಶಗಳಲ್ಲಿ ಅಂತಹ ಪರಿಣಾಮಗಳನ್ನು ತೋರಲಾರದು. ಆದ್ದರಿಂದ, ಒಂದು ಕ್ರಿಯೆಯ ಸ್ಥಳಕ್ಕೆ ಸಂಬಂಧಿಸಿದ ಪರಿಣಾಮಗಳ ಮುನ್ಸೂಚನೆಯನ್ನು ಕೇವಲ ಒಂದು ಕೃತಕ ಪ್ರಮಾಣದಲ್ಲಿ ಕಾಣಬಹುದಾಗಿದೆ. ಕೆಳ ಹಂತಗಳಲ್ಲಿನ ಅಥವಾ ಎಲ್ಲ ಹಂತಗಳಲ್ಲಿನ ಸ್ಥಳಕ್ಕೆ ಸಂಬಂಧಿಸಿದ ಪರಿಣಾಮಗಳನ್ನು ಅರಿಯಬೇಕೆನ್ನುವವರ ದೃಷ್ಟಿಯಲ್ಲಿ ಈ ನೀತಿಗಳು ಸಾಕಷ್ಟು ನಿರ್ದಿಷ್ಟವಾಗಿಲ್ಲ ಮತ್ತು ಆ ಕಾರಣದಿಂದಾಗಿಯೇ ಅವು ಆಶಿಸಿದಂತೆ ಹೆಚ್ಚು ಸ್ಥಳಕ್ಕೆ ಸಂಬಂಧಿಸಿದಂತೆ ಇಲ್ಲ.

ಹೆಚ್ಚು ಅಥವಾ ಸ್ಥಳಕ್ಕೆ ಸಂಬಂಧಿಸದೆ ಇರುವ ಚಟುವಟಿಕೆಗಳು ಎಂದು ಪರಿಗಣಿಸಲಾಗುವ ಮತ್ತು ಈ ಪರಿಕಲ್ಪನೆಗಳನ್ನು ಎಷ್ಟರ ಮಟ್ಟಿಗೆ ಪ್ರಜೆಗಳು ಹೊಂದಿದ್ದಾರೆ ಎಂಬುದು ಸಮಾಜದ ಅಂತರಿಕ ಚಲನೆಗಳು ಮತ್ತು ಒಂದು ಸ್ಥಳವು ಎಷ್ಟರ ಮಟ್ಟಿಗೆ ಸಮಾಜದ ಆಧಾರವಾಗಿದೆ ಎಂಬುದರ ಮೇಲೆ ಅವಲಂಬಿತವಾಗಿದೆ. ಪ್ರತೀ ಸಮಾಜದಲ್ಲೂ 'ಸ್ಥಳಕ್ಕೆ ಸಂಬಂಧಿಸಿದ' ಮತ್ತು 'ಸ್ಥಳಕ್ಕೆ ಸಂಬಂಧಿಸದೆ ಇರುವ' ವ್ಯತ್ಯಾಸಗಳನ್ನು ಸಂಸ್ಥೆಗಳ ಭೌತಿಕ ಮಟ್ಟ ಮತ್ತು ಆರ್ಥಿಕತೆಯಿಂದ ಹಿಡಿದು, ರಾಜಕೀಯ ಮತ್ತು ಸಾಮಾಜಿಕ ತತ್ವಗಳವರೆಗೆ ವಿವಿಧ ಮಟ್ಟದ ಅಮೂರ್ತತೆಯಲ್ಲಿ ಕಾಣಬಹುದು.

## ಪಾಶ್ಚಾತ್ಯ ಊಳಿಗಮಾನ್ಯ ಪದ್ಧತಿ

ಪಾಶ್ಚಾತ್ಯ ಊಳಿಗಮಾನ್ಯ ಸಮಯದಲ್ಲಿ ಸಮಾಜ ಮತ್ತು ಸ್ಥಳದ ಬೆಸುಗೆ ಗ್ರೀಕ್ ಮತ್ತು ರೋಮನರ ನಾಗರೀಕತೆಗಳಲ್ಲಿದ್ದದುಕ್ಕಿಂತ ಮತ್ತು ನಮ್ಮ ನಾಗರೀಕತೆಗಳಿಗಿಂತಲೂ ವಿಭಿನ್ನವಾಗಿದ್ದಿತು. ಪತನವಾಗುತ್ತಿದ್ದ ರೋಮನ್ ಸಾಮ್ರಾಜ್ಯದ ಭಾಗಗಳನ್ನು ಜೆರ್ಮ್ಯಾನಿಕ್ ಬುಡಕಟ್ಟುಗಳು ತಮ್ಮ ಸಮಾಜದೊಳಗೆ ಸೇರಿಸಿಕೊಂಡಾಗ ಊಳಿಗಮಾನ್ಯ ಪದ್ಧತಿಯು ಹುಟ್ಟಿಕೊಂಡಿತು; ಇದು ಆದಿಮರಿಂದ ಭೂ ಪ್ರದೇಶದ ನಾಗರಿಕ ದೃಷ್ಟಿಕೋನವನ್ನು ಸಮೀಕರಿಸಿ ಅಳವಡಿಸಿಕೊಳ್ಳುವುದಾಗಿತ್ತು. ರೋಮನ್ ವ್ಯವಸ್ಥೆಗಳಾದ *'ಪ್ರಿಕೇರಿಯಮ್ (precarium)'* ಅಂದರೆ ಒಂದು ಬಗೆಯ ಗೇಣಿ ಪದ್ಧತಿ, ಮತ್ತು *'ಪೆಟ್ರೊಸಿನಿಯಮ್ (patrocinium)'* ಅಂದರೆ ಆಹಾರ, ರಕ್ಷಣೆಗೆ ಪ್ರತಿಯಾಗಿ ಸೇವೆಗಳನ್ನು ಒದಗಿಸುತ್ತಿದ್ದ (ಊಳಿಗ ಮಾಡುವುದು) ಇವು ಮುಂದೆ ಊಳಿಗಮಾನ್ಯ ಪದ್ಧತಿಯ ದಾಸ್ಯತನ ಮತ್ತು ಊಳಿಗಮಾನ್ಯ ರೂಪಗಳಿಗೆ ಆಧಾರವಾದವು. ರೈತನು ತನ್ನ ಒಡೆಯನಿಗೆ ಸಂಪೂರ್ಣ ಮುಡಿಪಾಗಿರುವುದಾಗಿ ಪ್ರಮಾಣ ಮಾಡುತ್ತಿದ್ದನು, ಬೆಳೆಗೆ ತೆರಿಗೆ ಕಟ್ಟುವುದು, ಒಡೆಯನಿಗೆ ನಿರ್ದಿಷ್ಟ ಸೇವೆಗಳನ್ನೊದಗಿಸುವುದು ಇವು ಅವನ

ಬಾಧ್ಯತೆಗಳಾಗಿದ್ದವು, ಮತ್ತು ಇದಕ್ಕೆ ಬದಲಾಗಿ ಒಡೆಯನು ಅವರಿಗೆ ರಕ್ಷಣೆ ನೀಡಬೇಕಿತ್ತು. ಭೂ ಒಡೆತನವಿಲ್ಲದ ರೈತನ ಶ್ರಮದ ಮೇಲೆ ಇಡೀ ವ್ಯವಸ್ಥೆ ನಿಂತಿದ್ದಿತು. ಒಡೆಯನು ಭೂಮಿಯ ಮಾಲಿಕತ್ವ ಹೊಂದಿದ್ದನಾದರೂ ಆ ಮಾಲಿಕತ್ವ ಕೂಡ ಒಂದು ಮಟ್ಟದವರೆಗೆ ಮಾತ್ರ ಇದ್ದಿತು, ಏಕೆಂದರೆ ಆತನಿಗೂ ಮೇಲಿರುವ ಮತ್ತೊಬ್ಬ ಶ್ರೀಮಂತನಿಂದ ಇವನು ಭೂಮಿಯನ್ನು ಬಾಧ್ಯತೆಗಳೊಂದಿಗೆ ಪಡೆದಿರುತ್ತಿದ್ದನು, ಹೀಗೆ ಈ ಸಾಮಾಜಿಕ ಹಂತಗಳ ಮೂಲಕ ಉನ್ನತ ಮಟ್ಟದವರೆಗೆ, ಸಾಮ್ರಾಟನವರೆಗೆ ಮುಟ್ಟುತ್ತಿತ್ತು. ಸಿದ್ಧಾಂತದಲ್ಲಿ, ಸಾರ್ವಭೌಮನಿಲ್ಲದೆ ಯಾವುದೇ ಭೂಮಿ ಇರಲು ಸಾಧ್ಯವಿಲ್ಲ ಎನ್ನುವುದಾಗಿತ್ತು. *Nulle terre sans seigneur.* (ಊಳಿಗಮಾನ್ಯ ಕಾನೂನಿನ ಪ್ರಕಾರ, *ನೈಲ್ ಟೆರ್ರಿ ಸ್ಯಾನ್ಸ್ ಸಿನ್ಯೋರ್* – ಎಂಬುದು ಸಾರ್ವಭೌಮರಿಂದ ಭೂಮಿಯನ್ನು ಪಡೆಯುವ ಹಕ್ಕಿಗಾಗಿ ಒಬ್ಬನು ಸಾರ್ವಭೌಮನಿಗೆ ಸೇವೆಗಳನ್ನು ಒದಗಿಸಬೇಕಿತ್ತು.)

ರೈತರು ಭೂಮಿಗೆ ಕಟ್ಟುಬಿದ್ದಿವರಾಗಿದ್ದರು – *'ಗ್ಲೆಬೆಯಾಡಿಸ್ಕ್ರಿಪ್ಟಿ (glebae adscripti).'* ಎಲ್ಲಿಯವರೆಗೂ ರೈತರು ತಮ್ಮ ಬಾಧ್ಯತೆಯನ್ನು ಪೂರೈಸುತ್ತಾರೋ ಅಲ್ಲಿಯವರೆಗೂ ಆ ಜಾಗದಿಂದ ಅವರನ್ನು ಎಬ್ಬಿಸುವ ಹಾಗಿಲ್ಲ ಎಂಬುದು ಸಿದ್ಧಾಂತ. ಆದಾಗ್ಯೂ, ರೈತನೂ ಕೂಡ ತನ್ನಿಚ್ಛೆಯಂತೆ ಆ ಜಾಗ ಬಿಟ್ಟು ಹೋಗುವ ಹಾಗಿರಲಿಲ್ಲ. ಒಡೆಯನು ಒಬ್ಬ ಗುಲಾಮನನ್ನು ಮಾರಿದ ಹಾಗೆ ರೈತನನ್ನು ಮಾರವಂತಿಲ್ಲದಿದ್ದರೂ ಮತ್ತೊಬ್ಬ ಒಡೆಯನಿಗೆ ಭೂಮಿಯನ್ನು ಹಸ್ತಾಂತರಿಸಬಹುದಿತ್ತು ಮತ್ತು ಅದರ ಪರಿಣಾಮವಾಗಿ ರೈತನಿಗೆ ಬೇರೊಬ್ಬನು ಒಡೆಯನಾಗುತ್ತಿದ್ದ. ರೈತನಿಗಾದರೋ, ಸಾಮಾಜಿಕ ಮಟ್ಟದಲ್ಲಿ ಅವನ ಸಾಮಾಜಿಕ ಬದ್ಧತೆಗಳು ಮತ್ತು ಸಂಬಂಧಗಳನ್ನು ಅಧಿವಾಸ ಮೂಲಕ ನಿರ್ಧರಿಸಬಹುದಾಗಿತ್ತು. ಊಳಿಗಮಾನ್ಯ ಪೂರ್ವ ಕಾಲದಿಂದ ಬಂದ ಹಳ್ಳಿಯ ಸಾಮುದಾಯಿಕ ನೆಲಗಳು ಮತ್ತು ರೈತರ ನೆಲಗಳು ರೈತರ ಜೀತಗಾರಿಕೆಯನ್ನು ತಪ್ಪಿಸಲಿಲ್ಲ.

ಜಹಗೀರುದಾರ ವ್ಯವಸ್ಥೆಯ ಜೊತೆ ಜೊತೆಗೆ ಪಟ್ಟಣಗಳಿದ್ದವು. ಪಟ್ಟಣಗಳು ಗಾತ್ರದಲ್ಲಿ ಸಾಧಾರಣವಾಗಿದ್ದರೂ, ಮಧ್ಯಕಾಲೀನ ಆರ್ಥಿಕತೆಯಲ್ಲಿ ಅವು ಮುಖ್ಯ ಅಂಗಗಳಾಗಿದ್ದು ಅವು ಸ್ಥಳ ಮತ್ತು ಸಮಾಜವನ್ನು ಬೆಸೆದು ಜಹಗೀರು ವ್ಯವಸ್ಥೆಯ ಜೊತೆಗೆ ಒಟ್ಟಿಗಿದ್ದರೂ ಸಹ ಬಹಳಷ್ಟು ವಿಷಯಗಳಲ್ಲಿ ಅದಕ್ಕೆ ವಿಭಿನ್ನವಾಗಿದ್ದವು. ನಗರ ಪ್ರದೇಶದ ಗಡಿಯೊಳಗೆ ಬೇರೆಯೇ ಆದ ಕಾನೂನುಗಳಿದ್ದವು. ಜರ್ಮನ್ನರ ನುಡಿಗಟ್ಟಿನಂತೆ, "ನಗರದ ಗಾಳಿ ಮನುಷ್ಯರನ್ನು ಮುಕ್ತರನ್ನಾಗಿಸುತ್ತದೆ". ಪಟ್ಟಣನಲ್ಲಿ ಒಂದು ಶಾಶ್ವತ ವ್ಯಾಪಾರ ಸ್ಥಳವಿದ್ದರೆ, ವ್ಯಾಪಾರಿಗಳು ತಮ್ಮ ಸರಕುಗಳನ್ನು ಒಂದೆಡೆ ಇರಿಸಿ ಕಠಿಣ ಹವಾಗುಣದ ಋತುಗಳಲ್ಲಿ ಉಳಿದುಕೊಳ್ಳಲು ಅನುಕೂಲವಾಗಲಿ ಎಂಬ ಕಾರಣಕ್ಕಾಗಿಯೇ ಈ ವಿಶೇಷ ಕಾನೂನುಗಳು ರಚಿಸಲ್ಪಟ್ಟವು. ಈ ವಿಶೇಷ ಸ್ಥಳಗಳ ನಿವಾಸಿಗಳಿಗೆ ಪ್ರಯಾಣ ಮಾಡುವ ಹಕ್ಕಿನ ಅಗತ್ಯವಿತ್ತು ಮತ್ತು ವ್ಯಾಪಾರಿಗಳಿಂದ ಸರಕುಗಳನ್ನು ಕೊಳ್ಳಲು ಬಯಸುವವರು ಬಂದು ಹೋಗಿ ಮಾಡುವ ಮುಕ್ತ ವಾತಾವರಣದ ಅಗತ್ಯವಿದ್ದಿತು. ಈ ರೀತಿಯ ಸಂಚಲನದ ಸ್ವಾತಂತ್ರ್ಯಗಳಿಗೆ ಅನುವು ಮಾಡಿಕೊಟ್ಟಿದ್ದರೂ ವಿರೋಧಾಭಾಸವೆಂಬಂತೆ ಅವು ನಿರ್ದಿಷ್ಟ ಸ್ಥಳಗಳಿಗೇ ಸೀಮಿತವಾಗಿದ್ದವು. ಪಿರೆನ್ (Pirenne) ಹೇಳುವಂತೆ "ಸ್ವಾತಂತ್ರ್ಯವು ಬೂರ್ಜ್ವಾಗಳ ನ್ಯಾಯಯುತ ಸ್ಥಿತಿ ಆಯಿತು, ಎಷ್ಟರ ಮಟ್ಟಿಗೆಂದರೆ, ಕೇವಲ ವೈಯಕ್ತಿಕ ಸವಲತ್ತಾಗಿ ಉಳಿಯದೆ ಅದು ಪ್ರಾದೇಶಿಕ ಸವಲತ್ತಾಯಿತು, ಜಹಗೀರಿನ ವ್ಯವಸ್ಥೆಯಲ್ಲಿ ಹೇಗೆ ಜೀತವು ಅಂತರ್ಗತವಾಗಿತ್ತೋ ಹಾಗೆ ನಗರದ

ವ್ಯವಸ್ಥೆಗೆ ಇದು ಅಂತರ್ಗತವಾಗಿತ್ತು. ಈ ಹಕ್ಕನ್ನು ಪಡೆದುಕೊಳ್ಳಲು, ಒಂದು ವರ್ಷದ ಮೇಲೆ ಒಂದು ದಿನ ಆ ಪಟ್ಟಣದ ಸರಹದ್ದಿನೊಳಗೆ ವಾಸವಿದ್ದರೆ ಸಾಕಿತ್ತು."[5]

ಕುಶಲಕರ್ಮಿಗಳ ಸಂಘಗಳು ಪಟ್ಟಣಗಳ ಪ್ರಾದೇಶಿಕ ಅಧಿಕಾರದ ಮತ್ತೊಂದು ಪ್ರಮುಖ ಅಂಗಗಳಾದವು. ಈ ಸಂಘಗಳು ಪಟ್ಟಣಗಳಲ್ಲಿ ಕೌಶಲಗಳ ಏಕಸ್ವಾಮ್ಯವನ್ನು ಹುಟ್ಟುಹಾಕಿದವು. ಸಮುದಾಯದ ಅಧಿಕಾರ ವ್ಯವಸ್ಥೆಯಲ್ಲಿ ಈ ಸಂಘಗಳು ಭಾಗವಹಿಸಿದವು ಮತ್ತು ಯಾರೂ ಕೂಡ ಪಟ್ಟಣಗಳಲ್ಲಿ ಉತ್ಪಾದನೆಯಲ್ಲಿಯಾಗಲೀ ಅಥವಾ ಕಾರ್ಮಿಕರಾಗಿಯಾಗಲೀ ಆ ಸಮುದಾಯದ ಸಂಘಗಳ ಸದಸ್ಯರಾಗದೇ ಪಾಲ್ಗೊಳ್ಳಲು ಅಸಾಧ್ಯವಾಗಿತ್ತು. ಈ ಸಂಘಗಳು ಬಹುಪಾಲು ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶಕ್ಕೆ ಸಂಬಂಧಿಸಿದಂತೆ ಪರಸ್ಪರ ಸಂಬಂಧವನ್ನು ಹೊಂದಿರಲಿಲ್ಲ (ವ್ಯಾಪಾರೀ ಸಂಘಗಳು ಪರಸ್ಪರ ಸಂಬಂಧ ಹೊಂದಿದ್ದವು). ಈ ಸಂಘಗಳು ನಗರದ ಮಿತಿಯೊಳಗೇ ವ್ಯವಹರಿಸುತ್ತಿದ್ದವು.

ನಗರಗಳು ಮತ್ತು ಜಹಗೀರುಗಳು ಸಮಕಾಲೀನ ಮತ್ತು ಪ್ರಾದೇಶಿಕ ಸಾಮಾಜಿಕ ಸಂರಚನೆಗಳಾಗಿದ್ದರೂ ವಿಭಿನ್ನವಾಗಿಯೇ ಇದ್ದವು. ನಗರದ ಪ್ರಾದೇಶಿಕ ಘಟಕವು ತನ್ನ ಪ್ರಭಾವವನ್ನು ಹಿಗ್ಗಿಸಿಕೊಳ್ಳುತ್ತಾ ಜಹಗೀರಿನ ವ್ಯವಸ್ಥೆಯನ್ನು ವಾಣಿಜ್ಯ ಕೃಷಿ ಚಟುವಟಿಕೆಯನ್ನಾಗಿ ಪರಿವರ್ತಿಸಲು ಸಹಾಯ ಮಾಡಿತು. ಸರಕಿನ, ಜನರ ಮತ್ತು ಹಣದ ಹರಿವು ಇಂತಹ ಚಟುವಟಿಕೆಗಳ ಪ್ರಾಮುಖ್ಯತೆ ಹೆಚ್ಚಿದಂತೆ, ಅಸ್ತಿತ್ವದಲ್ಲಿದ್ದ ಪ್ರಾದೇಶಿಕ ಗಡಿಗಳೊಳಗೆ ಇವನ್ನು ಹಿಡಿದಿಡುವುದು ಅಸಾಧ್ಯವಾಗಿದ್ದರಿಂದ ನಗರವು ಪ್ರಾಬಲ್ಯ ಹೊಂದಲು ಭಾಗಶಃ ಕಾರಣವಾಯಿತು. ಜಹಗೀರು ವ್ಯವಸ್ಥೆಯ ಮೂಲಕ ಯಾವ ಈ ಹರಿವುಗಳನ್ನು ಸ್ಥಳದೊಳಗೆ ಹಿಡಿದಿಡಲಾಗಲಿಲ್ಲವೋ ಅವೇ ಮುಂದೆ ಕೈಗಾರಿಕೀಕರಣಗೊಂಡ ಸಮಾಜಗಳಲ್ಲಿ ಹೆಚ್ಚು ಅಥವಾ ಸ್ಥಳಕ್ಕೆ ಸಂಬಂಧಿಸದೆ ಇರುವ ಚಟುವಟಿಕೆಗಳಿಗೆ ಆಧಾರವಾಯಿತು. ಮಧ್ಯಕಾಲೀನದಲ್ಲೂ ಇಂತಹ ಚಟುವಟಿಕೆಗಳನ್ನು ಭೂ ಸ್ವತ್ತಿನಂತೆ ವಾಸ್ತವ ಸ್ವತ್ತಾಗಿ ಪರಿಗಣಿಸಿರಲಿಲ್ಲ ಮತ್ತು ಭೂಸ್ವತ್ತಿಗೆ ನೀಡಿದ ಸಮನಾದ ಸ್ಥಾನವನ್ನು ಅದಕ್ಕೆ ನೀಡಿರಲಿಲ್ಲ. ಭೂಮಿಯ ಆಸ್ತಿ ಅಂದು ಮತ್ತು ಇಂದಿಗೂ ಅದಕ್ಕಾಗಿಯೇ *'ಸ್ಥಿರಾಸ್ತಿ (real estate)'* ಎಂದು ಕರೆಸಿಕೊಳ್ಳುವುದು. ಉಳಿದದ್ದೆಲ್ಲ *'ಚರಾಸ್ತಿ (liquid assets)'* ಎಂದೇ ಕರೆಯಲ್ಪಡುತ್ತದೆ.

ನಗರಗಳು ಮತ್ತು ಜಹಗೀರಿನ ವ್ಯವಸ್ಥೆಗಳಂತಹ ಪ್ರಾದೇಶಿಕ ಘಟಕಗಳು ಒಟ್ಟೊಟ್ಟಿಗೆ ಇರುವುದು ಪ್ರಾದೇಶಿಕ ನಿರ್ಬಂಧಗಳು ಮತ್ತು ಅಭಿವ್ಯಕ್ತಿಗಳನ್ನು ಮೀರುವ ಪ್ರಕ್ರಿಯೆಗಳಿಗೆ ಜನ್ಮ ನೀಡಿತು. ಸಾಮಾಜಿಕ ಹಂತದಲ್ಲಿ 'ಸ್ಥಳಕ್ಕೆ ಸಂಬಂಧಿಸಿದಂತೆ ಅಲ್ಲದ (a-spatial)' ಪ್ರಮುಖ ಅಂಶವು ಕ್ರೈಸ್ತ ಸಮುದಾಯದ ಕಲ್ಪನೆಯಾಗಿತ್ತು. ವಾಸ್ತವವಾಗಿ, ಒಂದು ಸಂಸ್ಥೆಯಾಗಿ ಚರ್ಚ್ ಸ್ಥಳಕ್ಕೆ ಸಂಬಂಧ ಹೊಂದಿತ್ತು. ಅದು ಪ್ರಾದೇಶಿಕ ಆಡಳಿತವನ್ನು ಹೊಂದಿತ್ತು ಮತ್ತು ಭೂಮಿಯ ಮೇಲೆ ಅದು ಚರ್ಚುಗಳು ಮತ್ತು ಪವಿತ್ರ ಸ್ಥಾನಗಳ ರೂಪವನ್ನು ಪಡೆದಿತ್ತು. ಅನೇಕ ವೇಳೆ ಈ ಪ್ರಾದೇಶಿಕ ಅಂಶಗಳು ಧರ್ಮಾತೀತ ಸಮಾಜದ ಪ್ರಾದೇಶಿಕ ಘಟಕಗಳೊಡನೆ ಮತ್ತು ಚರ್ಚಿನ ಹೆಚ್ಚು ಅಲೌಕಿಕ ಚಿಂತನೆಗಳೊಡನೆ ಘರ್ಷಣೆಗಳಿಗೆ ಕಾರಣವಾಗುತ್ತಿತ್ತು. ಆದರೆ ಸಮಾಜದ ದೃಷ್ಟಿಕೋನದಿಂದ, ಊಳಿಗಮಾನ್ಯ ವ್ಯವಸ್ಥೆಗೆ ಚರ್ಚ್ ಪ್ರತಿನಿಧಿಸಿದ ಬಹು ಮುಖ್ಯ ವಿರೋಧವೆಂದರೆ ಅದು 'ಸ್ಥಳಕ್ಕೆ ಸಂಬಂಧಿಸಿದಂತೆ ಅಲ್ಲದ' ಕ್ರೈಸ್ತ ಸಮುದಾಯದ ಪರಿಕಲ್ಪನೆಯಾಗಿತ್ತು. ಈ ಸಮುದಾಯವು ಅಥವಾ ಸ್ವರ್ಗ ನಗರಿಯು ಐಹಿಕ ಸಮುದಾಯ ಮತ್ತು

ಗಡಿಗಳನ್ನು ಮೀರಿದ್ದಾಗಿತ್ತು. ಈಗಿನ ಜಗತ್ತಿನಲ್ಲಿನ 'ಸ್ಥಳಕ್ಕೆ ಸಂಬಂಧಿಸದೆ ಇರುವ' ಸಮಾಜದ ಅಂಶಗಳಂತಲ್ಲದೆ, ಲೋಕೋತ್ತರ ಚರ್ಚಿನ ಕ್ರೈಸ್ತ ಸಮುದಾಯವು ಸ್ಥಿರವೂ ಮತ್ತು ಅನಂತವೂ ಆದುದಾಗಿದ್ದರೆ, ಭೂಮಿಯ ಮೇಲಿನ ನಗರಗಳು ಅಶಾಶ್ವತವೂ ಮತ್ತು ಬದಲಾಗುವಂತಹುದೂ ಆಗಿತ್ತು.

ಕ್ರೈಸ್ತಧರ್ಮೀಯರನ್ನು ಈ ಲೋಕೋತ್ತರ ಕ್ರೈಸ್ತ ಸಮುದಾಯದ ಕಲ್ಪನೆಯು ಆವರಿಸಿ ಊಳಿಗಮಾನ್ಯ ಸಮಾಜದ ಮೇಲೆ ಮಹತ್ತರ ಪರಿಣಾಮವನ್ನು ಉಂಟುಮಾಡಿತು ಮತ್ತು ನಂತರದಲ್ಲಿ ಚರ್ಚ್ ಮತ್ತು ಪ್ರಭುತ್ವದ ನಡುವಿನ ಘರ್ಷಣೆಗೂ ದಾರಿ ಮಾಡಿಕೊಟ್ಟಿತಾದರೂ ಅದರಲ್ಲಿ ಪ್ರಭುತ್ವವೇ ಗೆಲುವು ಸಾಧಿಸಿತು. ಆದಾಗ್ಯೂ, ಬಂಡವಾಳಶಾಹಿಯ ಉಗಮವೇ ನಾಡಿನೊಳಗಿನ ಪ್ರಾದೇಶಿಕ ಸಂರಚನೆಯ ಬದಲಾವಣೆಗೆ ಮೂಲ ಕಾರಣವಾಯಿತು.

## ಬಂಡವಾಳಶಾಹಿ ವ್ಯವಸ್ಥೆ

ವ್ಯಾಪಾರೀ ಮತ್ತು ನಂತರದಲ್ಲಿ ಕೈಗಾರಿಕಾ ಬಂಡವಾಳವು ಹೆಚ್ಚಳವಾದಂತೆ ಉತ್ಪಾದನೆಯು ಹೆಚ್ಚು ಹೆಚ್ಚು ಬಂಡವಾಳಶಾಹಿಗಳ ಹಿಡಿತದಲ್ಲೇ ಕ್ರೋಢೀಕೃತವಾಯಿತು ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆ ಕಾರ್ಯಾಗಾರಗಳು ಮತ್ತು ಕಾರ್ಖಾನೆಗಳಲ್ಲಿ ಕೇಂದ್ರೀಕೃತವಾಯಿತು. ಇಲ್ಲಿ ಶ್ರಮಿಕರು ವೇತನಕ್ಕೆ ವ್ಯವಸ್ಥಾಪಕರರ ಮೇಲುಸ್ತುವಾರಿಯಲ್ಲಿ ದುಡಿಯುವವರಾದರು. ಹೀಗೆ ಕೆಲಸ ಸ್ಥಳವು ಮನೆಯಿಂದ ಬೇರೆಯಾಯಿತು ಮತ್ತು ಪ್ರಾದೇಶಿಕ ಹಿಡಿತವೆಂಬುದು ಕೆಲಸದ ಸ್ಥಳಗಳು (ಕೈಗಾರಿಕೆಗಳ ನಿಯಂತ್ರಣದಲ್ಲಿ ಮತ್ತು ಪ್ರಭುತ್ವವು ರೂಪಿಸಿದ ಅಗತ್ಯ ಆಸ್ತಿ ಕಾಯ್ದೆಗಳು ಮುಂತಾದುವುಗಳ ಮೂಲಕ) ಮತ್ತು ರಾಜಕೀಯ ಪ್ರದೇಶಗಳನ್ನೂ ಒಳಗೊಂಡಂತೆ ಒಂದು ನಿರ್ದಿಷ್ಟ ಉದ್ದೇಶಕ್ಕೆಂದಾಯಿತು. ಈ ನೂತನ ಆರ್ಥಿಕ ವ್ಯವಸ್ಥೆಗೆ ಬಲು ದೊಡ್ಡ ಮತ್ತು ಹೊಂದಿಕೊಳ್ಳುವ ಸಾಮರ್ಥ್ಯವಿರುವ ಕಾರ್ಮಿಕರ ದಂಡು ಇರುವುದು ಮತ್ತು ದಕ್ಷ ಮತ್ತು ನಂಬಲರ್ಹ ಸಾರಿಗೆಯ ಮೂಲ ಸೌಕರ್ಯಗಳೊಂದಿಗೆ 'ಮುಕ್ತ' ವ್ಯಾಪಾರ ಅಗತ್ಯವಾಯಿತು. ಸಮಾಜ ಮತ್ತು ಸ್ಥಳದ ಪ್ರಾಚೀನ ಪ್ರಾದೇಶಿಕ ಬೆಸುಗೆಯನ್ನು ಈ ಎಲ್ಲ ಅಂಶಗಳೂ ಬದಲಾಯಿಸಿದುವು. ಸಮಾಜ ಮತ್ತು ಸ್ಥಳದ ಮೂಲ ಬೆಸುಗೆಯನ್ನು ನಿರಂಕುಶ ಪ್ರಭುತ್ವ ಮತ್ತು ನಂತರದ ಆಧುನಿಕ ರಾಷ್ಟ್ರ ಪ್ರಭುತ್ವಗಳಂತಹ ದೊಡ್ಡ ಭೌಗೋಳಿಕ ಪ್ರಮಾಣಕ್ಕೆ ಬದಲಾಯಿಸಿ ಈ ಎಲ್ಲ ಆರ್ಥಿಕ ಚಟುವಟಿಕೆಗಳನ್ನು ಸುಸಂಘಟಿಸುವುದನ್ನು ಸಾಧಿಸಿದುವು. ಇದು ನಗರಗಳನ್ನು, ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರಭುತ್ವದ ಶ್ರೇಣೀಕೃತ ಪ್ರಾದೇಶಿಕ ವ್ಯವಸ್ಥೆಯಲ್ಲಿರುವ ಹಲವು ಪ್ರಾದೇಶಿಕ ಘಟಕಗಳಲ್ಲಿ ಸೀಮಿತ ಅಧಿಕಾರ ಹೊಂದಿರುವ ಒಂದು ಘಟಕವನ್ನಾಗಿಸಿತು. ಒಂದು ನಗರದ ನಿವಾಸಿಗಳು ಕೇವಲ ಆ ನಗರದ ಪ್ರಜೆಗಳಷ್ಟೇ ಅಲ್ಲದೇ ತಾವು ವಾಸಿಸುವ ಸ್ಥಳವು ಸೇರಿರುವ ಮೇಲಿನ ಮತ್ತು ಕೆಳಗಿನ ಹಂತಗಳ ರಾಜಕೀಯ ಆಡಳಿತಾತ್ಮಕ ಘಟಕಗಳ ಪ್ರಜೆಗಳೂ ಆಗಿದ್ದರು.

ನಮಗೆ ತಿಳಿದಿರುವಂತೆ, ರಾಷ್ಟ್ರ ಪ್ರಭುತ್ವದ ವ್ಯವಸ್ಥೆಯಲ್ಲಿ ಅದರ ಎಲ್ಲ ಶ್ರೇಣೀಕೃತ ಪ್ರಾದೇಶಿಕ ಘಟಕಗಳೊಂದಿಗೆ ಸಮಾಜಕ್ಕೆ ಸ್ಥಳವು ಆಧಾರ ಮೂಲವಾಗಿದ್ದರೂ, ವಿವಿಧ ಹಂತದ ಮತ್ತು ವಿವಿಧ ಪ್ರಕಾರಗಳ ಪ್ರಾದೇಶಿಕ ಸಂಸ್ಥೆಗಳ ನಡುವಿನ ತಿಕ್ಕಾಟಗಳನ್ನೇನೂ ತಡೆಯಲಿಲ್ಲ ಇಲ್ಲವೇ ಯಾವುದು ಹೆಚ್ಚು

ಸ್ಥಳಕ್ಕೆ ಸಂಬಂಧಿಸಿದಂತ ಪ್ರಕ್ರಿಯೆಗಳಲ್ಲ ಎಂದು ಭಾವಿಸಲಾಯಿತೋ ಅವುಗಳನ್ನು ನಿರ್ಬಂಧಿಸಲಾಗಿಲ್ಲ. ಹಾಗೆ ಏನಾದರೂ ಆಗಿದ್ದರೆ, ಅದರ ವಿರುದ್ಧವಾದದ್ದೇ ಆಗಿರುವುದು. ವ್ಯವಸ್ಥೆಯನ್ನು ನಿಯಂತ್ರಿಸಲು ಮತ್ತು ಸುಭದ್ರಗೊಳಿಸಲು ಮಾಡುವ ಯತ್ನಗಳೆಲ್ಲ ಸಂಕೀರ್ಣವೂ ಮತ್ತು ಉದ್ದೇಶಪೂರ್ವಕದ್ದೂ ಆದಂತೆ, ಹೆಚ್ಚು ಆಡಳಿತದ ಹಂತಗಳನ್ನು ಸ್ಥಾಪಿಸಿದಂತೆ, ಸ್ಥಳಕ್ಕೆ ಸಂಬಂಧಿಸಿದ ಮತ್ತು ಸ್ಥಳಕ್ಕೆ ಸಂಬಂಧಿಸದೆ ಇರುವಂತಹುವುದುಗಳನ್ನು ಒಳಗೊಳ್ಳುವ ಚಟುವಟಿಕೆಗಳು ಮತ್ತು ಪರಸ್ಪರ ಸಂಬಂಧಗಳ ನಡುವಿನ ವ್ಯತ್ಯಾಸಗಳು ಬೃಹತ್ತಾಗಿ ಬೆಳೆಯುತ್ತವೆ. ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶಕ್ಕೆ ಸಂಬಂಧಿಸಿದಂತ ಶ್ರೇಣೀಕೃತ ರಾಜಕೀಯ ಆಡಳಿತ ವ್ಯವಸ್ಥೆಯಿಂದಾಗಿ ಸ್ಥಳಕ್ಕೆ ಸಂಬಂಧಿಸಿದಂತೆ ನಿರ್ಧಾರಗಳ ಸ್ಪಷ್ಟೀಕರಣವು ಒಂದಕ್ಕೊಂದು ಹೊಂದಾಣಿಕೆಯಿಲ್ಲದಂತಾಗುತ್ತದೆ. ನಿರ್ಧಾರಗಳು ಯಾವುದೋ ಒಂದು ಶ್ರೇಣಿಗೆ ಮಾತ್ರ ಉದ್ದೇಶಿತದಾಗ್ದಿದರೂ ಅವು ಮುಂಗಾಣದ ರೀತಿಗಳಲ್ಲಿ ಎಲ್ಲ ಹಂತಗಳನ್ನೂ ಪರಿಣಾಮಿಸುತ್ತದೆ.  ಪ್ರಾದೇಶಿಕ ಘಟಕಗಳ ಬಗ್ಗೆ ಅಧಿಕಾರ ವ್ಯಾಪ್ತಿಯ ತಿಕ್ಕಾಟಗಳು ಏಳುತ್ತವೆ ಮತ್ತು ಒಂದರ ಕ್ರಿಯೆಗಳು ಮತ್ತೊಂದರ ಮೇಲೆ ಊಹಿಸದ ಪರಿಣಾಮಗಳನ್ನುಂಟುಮಾಡುತ್ತವೆ.

ಆರ್ಥಿಕ ಪ್ರಪಂಚದಲ್ಲೂ ಕೂಡ 'ಸ್ಥಳಕ್ಕೆ ಸಂಬಂಧಿಸಿದ' ಮತ್ತು 'ಸ್ಥಳಕ್ಕೆ ಸಂಬಂಧಿಸದೆ ಇರುವಂತಹುವುಗಳ' ನಡುವಿನ ವೈರುಧ್ಯದ ವಾಸ್ತವಗಳು ಅಥವಾ ಚಟುವಟಿಕೆಗಳನ್ನು ಕಾಣಬಹುದು. ಬಂಡವಾಳಶಾಹಿ ಸಮಾಜಗಳಲ್ಲಿ ಸ್ಥಳದ ಗಡಿಯನ್ನು ಸ್ಪಷ್ಟವಾಗಿ ಗುರುತು ಮಾಡಿದ ತುಂಡು ಭೂಮಿಗಳನ್ನು ಖಾಸಗಿಯಾಗಿ ಲಾಭಗಳಿಸುವ ಉದ್ದೇಶಕ್ಕಾಗಿಯೇ ಹೊಂದಿರುತ್ತಾರೆ. ಆ ಸ್ಥಳದಲ್ಲಿ ಅಥವಾ ಅದರ ಸುತ್ತ ಮುತ್ತ ಮುಂದೆ ಏನಾಗುತ್ತದೆಂಬುದರ ಆಧಾರದ ಮೇಲೆ ಭವಿಷ್ಯದಲ್ಲಿನ ಅದರ ಸಂಭಾವ್ಯ ಮೌಲ್ಯಕ್ಕಾಗಿ ಆ ನೆಲವನ್ನು ಕೊಂಡಿರಬಹುದು. ಆ ನೆಲದಲ್ಲಿ ಮಣ್ಣು, ಗಿಡಮರಗಳು ಅಷ್ಟೇ ಅಲ್ಲದೇ ಅಲ್ಲಿ ಕಡಮೆ ಆದಾಯದ ಕುಟುಂಬಗಳು ವಾಸವಿದ್ದರೂ ಕೊಳ್ಳುವ ಲಾಭಕೋರನಿಗೆ  ಆ ನೆಲದಲ್ಲಿ ಅಥವಾ ಅದರ ಸನಿಹದಲ್ಲಿ ಮುಂದೆ ಜರುಗುವ ಸಂಭಾವ್ಯ ಚಟುವಟಿಕೆಗಳು ಅದರ ಅಂದಿನ ಮೌಲ್ಯವನ್ನು ನಿರ್ಧರಿಸುತ್ತದೆ. ಆ ನೆಲದ ಸನಿಹದಲ್ಲಿ ಹೊಸ ಹೆದ್ದಾರಿಯನ್ನು ಮುಂದೆ ಕಟ್ಟಬಹುದು, ಅದರಿಂದ ಇದು ವಾಣಿಜ್ಯ ಭೂ ಪ್ರದೇಶವೆಂದು ಬೆಲೆಯು ಹೆಚ್ಚಾಗಬಹುದು. ಹೆದ್ದಾರಿ ನಿರ್ಮಾಣವಾದ ಮೇಲೂ ಸರಿಯಾದ ಬೆಲೆ ದೊರಕುವವರೆಗೂ ಭೂಮಿಯ ಮಾಲಿಕನು ಮಾರದೇ ಇರಬಹುದು ಅಥವಾ ಏನೂ ಕಟ್ಟಿಸದೇ ಇರಬಹುದು. ಇಂತಹ ಸನ್ನಿವೇಶಗಳಲ್ಲಿ ಆ ಭೂಭಾಗವು ಬರಿದಾಗಿದ್ದು ಮೌಲ್ಯಯುತವಾದ ಯಾವ ಸಂಪತ್ತನ್ನು ಹೊಂದಿಲ್ಲವೆಂದೂ ಹಾಗೂ ಸಂಪತ್ತನ್ನು ಭೂಮಿಯ ಮೇಲೆ ಭೌತಿಕವಾಗಿ ಇರದೆ ಅಮೂರ್ತವಾಗಿ ಮತ್ತೆಲ್ಲೋ ಇರುವ ಒಂದು ಸ್ಥಳಕ್ಕೆ ಸಂಬಂಧಿಸಿದಂತೆ ಅಲ್ಲದ ಅಸ್ತಿತ್ವಗಳು ಎಂಬಂತಹ ರೀತಿಯಲ್ಲಿ ಆರ್ಥಿಕ ವ್ಯವಸ್ಥೆಯು ನಮ್ಮ ಆಲೋಚನಾ ಧಾಟಿಯನ್ನು ರೂಪಿಸುತ್ತದೆ. ಕೇವಲ ಲಾಭ ದೊರೆಯುವ ಸಂದರ್ಭಗಳಲ್ಲಿ ಮಾತ್ರವೇ ಒಂದು ಜಾಗ ಮತ್ತು ಸಂಪತ್ತುಗಳು ಒಂದಾಗುತ್ತವೆ ಮತ್ತು ಅವುಗಳನ್ನು ಬೇರ್ಪಡಿಸಿ ಇತರ ಜಾಗ ಮತ್ತು ವಸ್ತುಗಳೊಂದಿಗೆ ಮರುಜೋಡಿಸಿ ಹೆಚ್ಚು ಲಾಭಕರವಾದ ಏರ್ಪಾಡು ಆಗುವವರೆಗೂ ಈ ಹಿಂದಿನ ಜೋಡಣೆ ಉಳಿದಿರುತ್ತದೆ.[...]

ಇಪ್ಪತ್ತನೇ ಶತಮಾನದಲ್ಲಿನ ಸಾಮಾಜಿಕ ವ್ಯವಸ್ಥೆಯು ಸಮಾಜ ವಿಜ್ಞಾನ ಮತ್ತು ವೈಜ್ಞಾನಿಕ ಯೋಜನೆಗಳು ಒದಗಿಸುವ ಸಂಕೀರ್ಣ ಆದರೆ ತಾತ್ಕಾಲಿಕ ಸಂಬಂಧಗಳ ಮೇಲೆಯೇ ಸಂಪೂರ್ಣವಾಗಿ

ಆಧಾರಿತವಾಗಿರುವುದು ಸಾಧ್ಯವಿಲ್ಲ. ಸಮಾಜ ಮತ್ತು ಸ್ಥಳದ ನಡುವಿನ ಬೆಸುಗೆಯನ್ನು ವಾಸ್ತವದಲ್ಲಿ ಸಂಕೀರ್ಣ ಮತ್ತು ಸಂಕೀರ್ಣವಲ್ಲದ ಮಾದರಿಗಳು ಜೊತೆಗೂಡುವುದರಿಂದಲೇ ಸಾಧಿಸಲಾಗುತ್ತದೆ. ಪ್ರಭುತ್ವವು ಸಮಾಜ ವಿಜ್ಞಾನದ ಸಂಕೀರ್ಣ ಮಾದರಿಗಳನ್ನು ಬಳಸಿಕೊಳ್ಳುತ್ತದೆ, ಕಲೆಯನ್ನು ಬಳಸಿಕೊಳ್ಳುತ್ತದೆ ಮತ್ತು ಸಂಕೀರ್ಣವಲ್ಲದ ಮಾದರಿಗಳನ್ನು ಉಪಯೋಗಿಸಿಕೊಂಡು ಪ್ರಜೆಗಳ ವರ್ತನೆಗೆ ಸ್ಥಳವನ್ನು ಆಧಾರವಾಗಿಸುತ್ತದೆ. ಅಮೇರಿಕ ಸಂಯುಕ್ತ ಸಂಸ್ಥಾನವು ದಿ ಕ್ಯಾಪಿಟೋಲ್ (the Capitol - ವಸ್ತುಶಿಲ್ಪದ ಸಾಧನೆಗೆ ಹೆಸರುವಾಸಿಯಾದ ಅಮೆರಿಕದ ಜನರನ್ನು ಸಂಕೇತಿಸುವ ಕಟ್ಟಡವಾಗಿದ್ದು ರಾಷ್ಟ್ರದ ಶಾಸಕಾಂಗ ಸಭೆ ಸೇರುವ ಸ್ಥಳ), ಲಿಂಕನ್ ಸ್ಮಾರಕ (the Lincoln Memorial), ಗ್ರಾಂಟ್ ಸಮಾಧಿ (Grant's Tomb) ಮುಂತಾದ ರಾಷ್ಟ್ರೀಯ ಸ್ಮಾರಕಗಳು, ಸಮಾಧಿಗಳು ಮತ್ತು 'ಪವಿತ್ರ' ಸ್ಥಳಗಳನ್ನು ಒಳಗೊಂಡಿರುವ ದೇಶದ 'ಅತಿಮುಖ್ಯ ಕೇಂದ್ರ' ವೆನಿಸಿಕೊಳ್ಳುವ ಜಾಗವೊಂದನ್ನು ಹೊಂದಿದೆ; ಧೃಢಕಾಯರಾದ ಗಡಿಕಾಯುವವರು ಮತ್ತು 'ಉದಾತ್ತ ಗುಣವುಳ್ಳ ಅನಾಗರಿಕ (noble savage)' ನು ಅದರ ಪುರಾಣೀಕರಿಸಲಾದ ಗತವನ್ನು ಸಂಕೇತಿಸುತ್ತದೆ. ಇಪ್ಪತ್ತನೇ ಶತಮಾನದಲ್ಲಿ ರಾಷ್ಟ್ರ ಪ್ರಭುತ್ವಗಳಿಗೆ ಇರುವ ಭಾವನಾತ್ಮಕ ಸಂಬಂಧವೇ ನೆಲದ ಬಗೆಗಿನ ಪುರಾಣ–ಮಾಯೆ ಪ್ರಜ್ಞೆಯು ಒಂದು ಸ್ಪಷ್ಟ ಅಭಿವ್ಯಕ್ತಿ ಎನ್ನಬಹುದು. ಯೀ–ಫೂ ಟ್ವಾನ್ (Yi-Fu Tuan) ಎತ್ತಿ ತೋರುವಂತೆ ಪವಿತ್ರ ಸ್ಥಳಗಳೇ ಅಧಿಕಾರದ ನೆಲೆ; ಅದರ ಎಲ್ಲೆಯು ಸ್ಪಷ್ಟವಾಗಿ ಗುರುತಿಸಲ್ಪಟ್ಟಿದೆ ಮತ್ತು ಪ್ರತ್ಯೇಕಿಸಲ್ಪಟ್ಟಿದೆ; ಇದು ಪರಿಪೂರ್ಣವೆಂದು ಭಾವಿಸಲಾಗಿದೆ; ಮತ್ತು ಅದನ್ನು ರಕ್ಷಿಸಲು ಪರಮ ತ್ಯಾಗವನ್ನು ಬೇಡುತ್ತದೆ.[6] ಆಧುನಿಕ ರಾಷ್ಟ್ರೀಯ ಪ್ರಭುತ್ವಗಳಿಗೆ ಈ ಎಲ್ಲ ಗುಣಲಕ್ಷಣಗಳೂ ಅನ್ವಯಿಸುತ್ತವೆ. ಪ್ರತಿಯೊಂದು ಪ್ರಭುತ್ವವೂ ಜನ ಮತ್ತು ಸ್ಥಳವನ್ನು ಪ್ರತ್ಯೇಕೀಕರಿಸುವ ವಿಭಿನ್ನ ಪರಿಕಲ್ಪನೆಗಳನ್ನು ಹೊಂದಿರುತ್ತದೆಯಾದರೂ ಅವುಗಳ ಮರುಜೋಡಣೆಗೆ ಬೇರೆ ಬೇರೆ ಪ್ರಮಾಣದ ಸಂಕೀರ್ಣ ಮತ್ತು ಸಂಕೀರ್ಣವಲ್ಲದ ಮಾದರಿಗಳ ಮಿಶ್ರಣದ ಮೇಲೆಯೇ ಅವಲಂಬಿತವಾಗಿರುತ್ತದೆ. ಈ ವ್ಯತ್ಯಾಸಗಳನ್ನು ಅರಿತುಕೊಳ್ಳುವುದೇ ಸ್ಥಳಕ್ಕೆ ಸಂಬಂಧಿಸಿದ ಸಾಮಾಜಿಕ ಪರಿಚಲನೆಯ ದೃಷ್ಟಿಕೋನ. ಆದಿಮ ಸಮಾಜಕ್ಕೂ ಮತ್ತು ಆಧುನಿಕ ಸಮಾಜಕ್ಕೂ ಈ ಸ್ಥಳದ ಸಾಮಾಜಿಕ ಪರಿಕಲ್ಪನೆಯಲ್ಲಿರುವ ವ್ಯತ್ಯಾಸವೆಂದರೆ ಆಧುನಿಕ ಸಮಾಜಕ್ಕೆ ಲಭ್ಯವಿರುವ ಈ ಮಿಶ್ರಣಗಳ ಸಾಧ್ಯತೆ ಮತ್ತು ಆದಿಮ ಸಮಾಜಕ್ಕಿಂತ ಭಿನ್ನವಾಗಿ ಆಧುನಿಕ ಸಮಾಜಕ್ಕೆ ಹೆಚ್ಚು ವಿಶೇಷವಾದ ಸಂಕೀರ್ಣ ದೃಷ್ಟಿಕೋನಗಳು ಲಭ್ಯವಾಗುವ ಅವಕಾಶಗಳು. ಇಂತಹ ವಿಧಾನಗಳ ಹುಟ್ಟಿಗೆ ಕಾರಣವಾದ ಸಾಮಾಜಿಕ ಜೀವನದ ಸಂಕೀರ್ಣತೆಗಳು ಮತ್ತು ಅವಕಾಶಗಳಿಂದ ಸಾಮಾಜಿಕ ವ್ಯವಸ್ಥೆ ಮತ್ತು ಭೌಗೋಳಿಕ ಪ್ರದೇಶಗಳ ನಡುವಿನ ಮಹತ್ವಪೂರ್ಣ ಸಂಬಂಧಗಳ ಬಗ್ಗೆ ಹೆಚ್ಚಿನ ಅನಿಶ್ಚಿತತೆ, ನಿರ್ಲಿಪ್ತತೆ ಮತ್ತು ಸಿನಿಕತನ ಮೂಡುತ್ತವೆ.

**ಅನುವಾದ: ಜನಾರ್ಧನ್**
**ಪರಿಶೀಲನೆ: ಅಶ್ವಿನ್**

**Commented [AKAP11]:** Find a better alternative. Not the correct translation.

**Commented [AKAP12]:** Not flowing well.

**Notes**

1. L. Levy-Bruhl, *The 'Soul' of the Primitive* (Chicago: Henry Regnery,1971), p.185.

2 S. Diamond, *In Search of the Primitive* (New Brunswick, N.J . :Transaction Books, 1974), p.192.

3 Fr Van Wing, *Etudes Bakongo*, deuxieme edition (Desclee de Brouwer,1959), pp. 93-4.

4 F. Engels, *The Origin of the Family, Private Property and the State* (New York: International Publishers, 1972), p.176.

5 H. Pirenne, *Economic and Social History of Medieval Europe* (New York: Harcourt Brace and World, 1937), p.51.

6 Yi-Fu Tuan, *Space and Place* ( Minneapolis, University of Minnesota Press,1977).

**ಸಂಪಾದಕರ ಟಿಪ್ಪಣಿಗಳು**

- ಮೂಲಗ್ರಂಥವು ಸವಿಸ್ತಾರವಾದ ಬಹಳಷ್ಟು ಅಡಿಟಿಪ್ಪಣಿಗಳನ್ನು ಹೊಂದಿದೆ. ಇಲ್ಲಿ ನಾವು ಕೆಲವೇ ಆಕರಗಳಿಗೆ ಮಿತಗೊಳಿಸಿದ್ದೇವೆ. ಸ್ಯಾಕ್ ಬಳಸಿರುವ ಆಧಾರಗ್ರಂಥಗಳಿಗೆ ಆಸಕ್ತ ಓದುಗರು ಮೂಲ ಪುಸ್ತಕವನ್ನೇ ನೋಡಬೇಕು.
- ಮೂಲದಲ್ಲಿ ಸ್ಯಾಕ್, 'ಆದಿಮ' ಎಂಬ ಪದದ ಬಗೆಗಿನ ಚರ್ಚೆಗೆ ಒಂದು ಭಾಗವನ್ನು ಮೀಸಲಿಟ್ಟಿರುತ್ತಾರೆ. ನಮ್ಮ ಕೇಂದ್ರ ವಿಷಯವಾದ ಪ್ರದೇಶ ಮತ್ತು ಸಮಾಜದ ಚರ್ಚೆಗೆ ಇದು ಅಮುಖ್ಯವೆಂದು ಆ ಭಾಗವನ್ನು ಬಿಡಲಾಗಿದೆ. ಆದಾಗ್ಯೂ ಸ್ಯಾಕ್ ಹೇಳಿದಂತೆ 'ಆದಿಮ' ಎನ್ನುವ ಪದವನ್ನು ಹೀನಾರ್ಥಕವಾಗಿ ಭಾವಿಸಬಾರದು.

*(Source: Robert David Sack, *Conceptions of Space in Social Thought*: *A Geographic Perspective* (London: Macmillan, 1980), pp. 167-93)